**ದಿನಾಂಕ 29-02-2016 ರಂದು ಮಧ್ಯಾಹ್ನ 3-30 ಘಂಟೆಗೆ ಕೊಠಡಿ ಸಂಖ್ಯೆ: 118, 1ನೇ ಮಹಡಿ, ವಿಕಾಸಸೌಧ, ಬೆಂಗಳೂರು ಇಲ್ಲಿ ನಡೆದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 84ನೇ ಸಭೆಯ (12ನೇ ಮಂಡಳಿಯ 4ನೇ ಸಭೆ) ನಡವಳಿಗಳು**

| | |
|---|---|
| **ಅಧ್ಯಕ್ಷತೆ** | **ಶ್ರೀ ಪಿ.ಟಿ ಪರಮೇಶ್ವರ ನಾಯ್ಕ,<br>ಕಾರ್ಮಿಕ ರಾಜ್ಯ ಸಚಿವರು ಹಾಗೂ<br>ಅಧ್ಯಕ್ಷರು,<br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,<br>ಬೆಂಗಳೂರು.** |
| **ಹಾಜರಿದ್ದ ಸದಸ್ಯರು** | 1) **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**<br>ಆರ್ಥಿಕ ಇಲಾಖೆ,<br>ವಿಧಾನ ಸೌಧ, ಬೆಂಗಳೂರು.<br>2) **ಅಧ್ಯಕ್ಷರು,**<br>ಭಾರತೀಯ ಮಜ್ದೂರ ಸಂಘ,<br>ನಂ. 458, ಒ.ಟಿ.ಸಿ. ರಸ್ತೆ,<br>ಬೆಂಗಳೂರು-53.<br>3) **ಅಧ್ಯಕ್ಷರು,**<br>ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್,<br>"ಸೂರಿ ಭವನ", # 40/5, 2ಬಿ ಮೇನ್,<br>16 ನೇ ಕ್ರಾಸ್, 2ನೇ ಬಿ' ಮುಖ್ಯ ರಸ್ತೆ,<br>ಸಂಪಂಗಿರಾಮನಗರ, ಬೆಂಗಳೂರು-27.<br>4) **ಅಧ್ಯಕ್ಷರು,**<br>ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್,<br>ನಂ.6, ಶಿರೂರು ಪಾರ್ಕ್ ರಸ್ತೆ,<br>ಶೇಷಾದ್ರಿಪುರಂ, ಬೆಂಗಳೂರು-20.<br>5) **ಅಧ್ಯಕ್ಷರು,**<br>ಕರ್ನಾಟಕ ಟೆಕ್ಸ್‌ಟೈಲ್ಸ್ ಮಿಲ್ಸ್ ಅಸೋಸಿಯೇಷನ್,<br>ವಸ್ತ್ರ ಭವನ, ನಂ.64, 4ನೇ ಮೇನ್,<br>18ನೇ ಕ್ರಾಸ್ ಹತ್ತಿರ, ಮಲ್ಲೇಶ್ವರಂ,<br>ಬೆಂಗಳೂರು- 3.<br>6) **ಅಧ್ಯಕ್ಷರು,**<br>ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ ಆಫ್<br>ಕಾಮರ್ಸ್ ಅಂಡ್ ಇಂಡಸ್ಟ್ರೀಸ್,<br>ಕೆ.ಜಿ.ರಸ್ತೆ,<br>ಬೆಂಗಳೂರು.<br>7) **ಅಧ್ಯಕ್ಷರು,**<br>ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್<br>ಅಸೋಸಿಯೇಷನ್ (ಕಾಸ್ಸಿಯಾ),<br>#106, 17 ನೇ ಅಡ್ಡ ರಸ್ತೆ,<br>ಮಾಗಡಿ ಕಾರ್ಡ್ ರಸ್ತೆ,<br>ಬೆಂಗಳೂರು. |

| | |
|---|---|
| | 8) **ಅಧ್ಯಕ್ಷರು,**<br>ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಇಂಟೆಕ್),<br>26/1, 8ನೇ ಮುಖ್ಯರಸ್ತೆ,<br>11ನೇ ಕ್ರಾಸ್, ಮಲ್ಲೇಶ್ವರಂ,<br>ಬೆಂಗಳೂರು-3<br><br>9) **ಅಧ್ಯಕ್ಷರು,**<br>ಬೆಂಗಳೂರು ಛೇಂಬರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ (ಬಿ.ಎಂ.ಸಿ.ಐ.), 3/4, 3ನೇ ಮಹಡಿ,<br>ಯೂನಿಟಿ ಬಿಲ್ಡಿಂಗ್, ಜೆ.ಸಿ. ರೋಡ್,<br>ಬೆಂಗಳೂರು-2<br><br>10) **ಶ್ರೀಮತಿ ಭಾರತಿ,**<br>ಟಿ.ಜಿ. ಬಡಾವಣೆ,<br>ಎಸ್.ಎಫ್.ಸಿ.ಎಸ್. ಬ್ಯಾಂಕ್ ಬಿಲ್ಡಿಂಗ್,<br>ಹೊಸಕೋಟೆ, ಬೆಂಗಳೂರು.<br><br>11) **ಶ್ರೀಮತಿ ಪಾರ್ವತಮ್ಮ. ಕೆ,**<br>ಕೋಂ ಬಿ.ಆರ್. ನಾಗರಾಜ್,<br>ನಂ.315-ಜೆ, 2ನೇ ಮುಖ್ಯ,<br>ಕಸ್ತೂರಿ ನಗರ,<br>ಈಸ್ಟ್ ಆಫ್ ಎನ್‌ಜಿಇಎಫ್,<br>ಬೆಂಗಳೂರು-43. |
| **ಸಭೆಗೆ ಗೈರು ಹಾಜರಾದ ಸದಸ್ಯರು:** | **1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**<br>**ಕಾರ್ಮಿಕ ಇಲಾಖೆ,**<br>**ವಿಕಾಸ ಸೌಧ, ಬೆಂಗಳೂರು-1.**<br><br>2) **ಕಾರ್ಮಿಕ ಆಯುಕ್ತರು,**<br>ಕಾರ್ಮಿಕ ಭವನ,<br>ಬನ್ನೇರುಘಟ್ಟ ರಸ್ತೆ,<br>ಬೆಂಗಳೂರು. |
| **ಮಂಡಳಿ ಅಧಿಕಾರಿಗಳು:** | **1) ಶ್ರೀ ಇ. ಲಕ್ಷ್ಮಪ್ಪ,**<br>**ಕಲ್ಯಾಣ ಆಯುಕ್ತರು**<br>**2) ಶ್ರೀಮತಿ ಬಿ.ಎಸ್. ಮಂಜುಳಾದೇವಿ,**<br>**ಲೆಕ್ಕಾಧಿಕಾರಿಗಳು** |

ಕಲ್ಯಾಣ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಇತರ ಎಲ್ಲಾ ಮಂಡಳಿಯ ಸದಸ್ಯರುಗಳನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 84ನೇ ಸಭೆ (12ನೇ ಮಂಡಳಿಯ 4ನೇ ಸಭೆ) ಗೆ ಸ್ವಾಗತಿಸಿ ಸಭೆಯನ್ನು ನಡೆಸಿಕೊಡಲು ಅಧ್ಯಕ್ಷರನ್ನು ಕೋರಿದರು.

**ಕಾರ್ಯಸೂಚಿ–1–**

**ದಿನಾಂಕ: 18–03–2015 ರಂದು ನಡೆದ ಮಂಡಳಿಯ 83ನೇ ಸಭೆಯ ನಡವಳಿಯನ್ನು ಓದಿ ಸ್ಥಿರೀಕರಿಸುವುದು:**

ದಿನಾಂಕ: 18–03–2015 ರಂದು ನಡೆದ ಮಂಡಳಿಯ 83ನೇ ಸಭೆಯ ನಡವಳಿಯನ್ನು ಕಲ್ಯಾಣ ಆಯುಕ್ತರು ಓದಲು ಪ್ರಾರಂಭಿಸಿದಾಗ, ಶ್ರೀ ದೇಶಪಾಂಡೆ, ಭಾರತೀಯ ಮಜ್ದೂರ ಸಂಘ ಬೆಂಗಳೂರು–53 ಇವರು ಮಧ್ಯ ಪ್ರವೇಶಿಸಿ ಸಭೆಯ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡದೆ ದಿನಾಂಕ:18–03–2015 ರಂದು ನಡೆದ ಮಂಡಳಿಯ 83ನೇ ಸಭೆಯ ನಡವಳಿಯನ್ನು ಎಲ್ಲಾ ಸದಸ್ಯರುಗಳು ಓದಿರುವುದಾಗಿ ತಿಳಿಸಿದಾಗ, ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪುವುದರ ಮೂಲಕ ಅಂಗೀಕರಿಸಲಾಯಿತು.

**ಕಾರ್ಯಸೂಚಿ–2:–**

**ದಿನಾಂಕ: 18–03–2015 ರಂದು ನಡೆದ ಮಂಡಳಿಯ 83ನೇ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳು.**

ಕಲ್ಯಾಣ ಆಯುಕ್ತರು ಮಾತನಾಡಿ ದಿನಾಂಕ: 18–03–2015 ರಂದು ನಡೆದ ಮಂಡಳಿಯ 83ನೇ ಸಭೆಯ ನಿರ್ಣಯಗಳ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.

**ಕಾರ್ಯಸೂಚಿ–3**

**2016–17ನೇ ಸಾಲಿನ ಆಯವ್ಯಯ ಅನುಮೋದನೆ ಬಗ್ಗೆ ಹಾಗೂ 2015–16ನೇ ಸಾಲಿನ (ಏಪ್ರಿಲ್ 2015 ರಿಂದ ಜನವರಿ 2016 ರವರೆಗೆ) ಆಯವ್ಯಯದಲ್ಲಿನ ವಾಸ್ತವಿಕ ವೆಚ್ಚವನ್ನು ಅನುಮೋದಿಸುವ ಬಗ್ಗೆ.**

1. ವಂತಿಕೆ (ಕಾರ್ಮಿಕರು, ಮಾಲೀಕರು ಮತ್ತು ರಾಜ್ಯ ಸರ್ಕಾರದಿಂದ) 2016–17ನೇ ಸಾಲಿಗೆ ₹ 8,33,00,000/– ಗಳನ್ನು,
2. ರಾಜ್ಯ ಸರ್ಕಾರದ ಸಹಾಯಧನ ₹10,00,000/–
3. ಮಂಡಳಿಯ ಕಟ್ಟಡಗಳು ಮತ್ತು ಸಮುದಾಯ ಭವನದಿಂದ ಬರುವ ಅಂದಾಜು ಬಾಡಿಗೆ ₹ 45,00,000/–
4. ನಿಶ್ಚಿತ ಠೇವಣಿಯಿಂದ ಬರುವ ಬಡ್ಡಿ ಮತ್ತು ಉಳಿತಾಯ ಖಾತೆಯಿಂದ ಬಂದಿರುವ ಬಡ್ಡಿ ಹಾಗೂ ಇತರೆ ಮೊತ್ತ ₹3,65,00,000/–

ಹೀಗೆ ಎಲ್ಲಾ ಸೇರಿ ಒಟ್ಟು ಆದಾಯ ₹12,53,00,000/–ಗಳನ್ನು ನಿರೀಕ್ಷಿಸಲಾಗಿದೆ ಎಂದು ಕಲ್ಯಾಣ ಆಯುಕ್ತರು ಸಭೆಗೆ ತಿಳಿಸಿದರು.

ಈ ಆದಾಯದಲ್ಲಿ ವೇತನ (ನಿವೃತ್ತಿ ವೇತನ, ವೈದ್ಯಕೀಯ ವೆಚ್ಚ ಮರುಪಾವತಿ, ರಜೆ ನಗಧೀಕರಣ) ಕ್ಕಾಗಿ ₹ 3,15,00,000/–, ಯೋಜನೆಗಳ ವೆಚ್ಚ ₹2,50,00,000/– ಸಾಮಾನ್ಯ ಆಡಳಿತ ರೂ.81,83,000/– ಮಂಡಳಿ ನಿರ್ವಹಣೆ ಮತ್ತು ಉಪಕರಣಗಳು ₹5,10,000/– ಮಂಡಳಿಯ ಆಸ್ತಿ ಅಭಿವೃದ್ಧಿ ನಿರ್ವಹಣೆ ₹6,00,00,000/– ಹೀಗೆ ಒಟ್ಟು ₹12,51,93,000/–ಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಶ್ರೀ ಶಾಂತಕುಮಾರ್, ಇಂಟಕ್ ಇವರು ಮಾತನಾಡಿ, ಕಳೆದ ವರ್ಷದಲ್ಲಿ ಅಂದಾಜಿಸಲಾದ ಆದಾಯ ಮತ್ತು ವೆಚ್ಚ ಹಾಗೂ ಉಳಿಕೆಯನ್ನು ಪ್ರತ್ಯೇಕವಾಗಿ ತಖ್ತೆಯಲ್ಲಿ ನಮೂದಿಸಿದಾದಲ್ಲಿ ಈ ವರ್ಷದ ಅಂದಾಜು ಆದಾಯ, ವೆಚ್ಚ ಮತ್ತು ಉಳಿಕೆಯನ್ನು ತೀರ್ಮಾನಿಸಲು ಅನುಕೂಲವಾಗುತ್ತಿತ್ತು ಎಂದು ತಿಳಿಸಿದಾಗ, ಕಲ್ಯಾಣ ಆಯುಕ್ತರು ಮಾತನಾಡಿ ಆರ್ಥಿಕ ವರ್ಷ ಇನ್ನೂ ಮುಗಿಯದಿರುವ ಕಾರಣ ಹಾಗೂ ಲೆಕ್ಕ ಪರಿಶೋಧನಾ ವರದಿ ಬಂದಿರುವುದಿಲ್ಲವಾದ್ದರಿಂದ ಆ ರೀತಿ ಪ್ರತ್ಯೇಕವಾಗಿ ತಖ್ತೆಯಲ್ಲಿ ತೋರಿಸಿರುವುದಿಲ್ಲವೆಂದು ತಿಳಿಸಿದಾಗ, ಫೆಬ್ರವರಿ–2016ರವರೆಗಾದರೂ ತಖ್ತೆಯಲ್ಲಿ ತೋರಿಸಲು ಯಾವುದೇ ತೊಂದರೆ ಇರಲಿಲ್ಲವೆಂದು ಹಾಗೂ ಮಧ್ಯಂತರ ವರದಿಯನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲವೆಂದು ಸಭೆಗೆ ತಿಳಿಸಿದಾಗ, ಅಧ್ಯಕ್ಷರು ಮಧ್ಯಪ್ರವೇಶಿಸಿ ಈ ಬಗ್ಗೆ ನಡವಳಿಯಲ್ಲಿ 2015–16ನೇ ಸಾಲಿಗೆ ಸಂಬಂಧಿಸಿದ ವಿವರಗಳನ್ನು ನಮೂದಿಸುವಂತೆ ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಹಾಗೂ 2016–17ನೇ ಸಾಲಿನ ಅಂದಾಜು ವೆಚ್ಚದ ವಿವರಣಾ ಪಟ್ಟಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ಕಾರ್ಯಸೂಚಿ–4

1. **ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಹೆಚ್ಚಿಸುವುದು ಹಾಗೂ ಪರಿಷ್ಕರಿಸುವ ಬಗ್ಗೆ.**

ಕಲ್ಯಾಣ ಆಯುಕ್ತರು ಕಾರ್ಯಸೂಚಿ–4 ರ ಅಂಶಗಳಾದ, ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಕೆ ಪಾವತಿಸುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ, ವಿವಿಧ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಾರ್ಮಿಕ ಮಕ್ಕಳಿಗೆ ಕಾರ್ಮಿಕ ಕಲ್ಯಾಣ ಯೋಜನೆಯಡಿ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ನೀಡಲಾಗುತ್ತಿದೆ. ಕಾರ್ಮಿಕರ ಮಕ್ಕಳಿಗೆ ಕಲ್ಯಾಣ ಯೋಜನೆಯಡಿಯಲ್ಲಿ ಪ್ರೌಢಶಾಲೆ (8ನೇ ತರಗತಿಯಿಂದ 10ನೇ ತರಗತಿಯವರೆಗೆ), ₹1500/–, ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ, ಡಿಪ್ಲೋಮಾ, ಐಟಿಐ, ಡಿಇಡಿ, ನರ್ಸಿಂಗ್ ತರಬೇತಿ ಮತ್ತು ಪಿಯುಸಿಗೆ ತತ್ಸಮಾನವಾದ ವ್ಯಾಸಂಗ) ₹ 2000/–, ಪದವಿ ವ್ಯಾಸಂಗಕ್ಕೆ ₹2200/–, ಸ್ನಾತಕೋತ್ತರ ವ್ಯಾಸಂಗಕ್ಕೆ ₹3000/– ಮತ್ತು ಮೆಡಿಕಲ್, ಇಂಜಿನಿಯರಿಂಗ್ ವ್ಯಾಸಂಗಕ್ಕೆ ₹5000/– ಗಳ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ವಿದ್ಯಾರ್ಥಿಗಳು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹೊಂದಿರುವ ಉಳಿತಾಯ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ನೇರವಾಗಿ ಜಮಾ ಮಾಡಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಪ್ರವೇಶ ಶುಲ್ಕ, ಬೋಧಕ ಶುಲ್ಕ, ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿಗಳ ಬೆಲೆಗಳು ಹೆಚ್ಚಾಗಿದ್ದು, ಕಾರ್ಮಿಕರ ಮಕ್ಕಳು ವಿದ್ಯಾಭ್ಯಾಸ ಮಾಡಲು ಕಷ್ಟಕರವಾಗಿರುತ್ತದೆ. ಆದ್ದರಿಂದ ಪ್ರಸ್ತುತ ನೀಡುತ್ತಿರುವ ಧನ ಸಹಾಯವನ್ನು ಪ್ರತಿ ಹಂತಕ್ಕೆ ₹500/–ಗಳನ್ನು ಹೆಚ್ಚಿಗೆ ಮಾಡುವುದರಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಭಾವಿಸಿ ಮುಂದಿನ 2016–17ನೇ ಶೈಕ್ಷಣಿಕ ವರ್ಷದಿಂದ ಅರ್ಹ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಹೆಚ್ಚಿಸುವ ಬಗ್ಗೆ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ**

ಈ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿ ಕಾರ್ಮಿಕರ ಮಕ್ಕಳಿಗೆ ಹಾಲಿ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನವು ತುಂಬಾ ಕಡಿಮೆ ಇದ್ದು, ಈ ರೀತಿ ತುಂಬಾ ಕಡಿಮೆ ನೀಡುತ್ತಿರುವ ಶೈಕ್ಷಣಿಕ ಧನ ಸಹಾಯದ ಮೊತ್ತವನ್ನು ಹೆಚ್ಚಿಸಬೇಕೆಂದು ಹಾಗೂ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಪಡೆಯಲು ಅರ್ಜಿ ಸಲ್ಲಿಸಲು ಹಾಲಿ ಇರುವ ಅರ್ಹತೆಯಾದ ಸಾಮಾನ್ಯವರ್ಗ ಶೇ.50%, ಪ.ಜಾ/ಪ.ಪಂ ಶೇ.45% ಇರುವ ಪದ್ಧತಿಯನ್ನು ತೆಗೆಯಲು ಸದಸ್ಯರು ಒಕ್ಕೊರಲಿನಿಂದ ಅಧ್ಯಕ್ಷರನ್ನು ಕೋರಿದರು.

**ನಿರ್ಣಯ :–**

ಅಧ್ಯಕ್ಷರು ಸದಸ್ಯರುಗಳ ಕೋರಿಕೆಯನ್ನು ಪರಿಗಣಿಸಿ, ಈ ಕೆಳಕಂಡಂತೆ ನಿರ್ಣಯ ಪ್ರಕಟಿಸಿದರು.

| ಕ್ರಮ ಸಂಖ್ಯೆ | ವ್ಯಾಸಂಗದ ವಿವರಗಳು | ಹಾಲಿ ಪಡೆಯುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ (₹ಗಳಲ್ಲಿ) | ಪರಿಷ್ಕೃತ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ (₹ಗಳಲ್ಲಿ) |
|---|---|---|---|
| 1 | ಪ್ರೌಢಶಾಲೆ (8ನೇ ತರಗತಿಯಿಂದ 10ನೇ ತರಗತಿಯವರೆಗೆ | 1,500/– | 3,000/– |
| 2 | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ, ಡಿಪ್ಲೋಮಾ, ಐಟಿಐ, ಡಿಇಡಿ, ನರ್ಸಿಂಗ್ ತರಬೇತಿ ಮತ್ತು ಪಿಯುಸಿಗೆ ತತ್ಸಮಾನವಾದ ವ್ಯಾಸಂಗ) | 2,000/– | 4,000/– |
| 3 | ಪದವಿ ವ್ಯಾಸಂಗಕ್ಕೆ | 2,200/– | 5,000/– |
| 4 | ಸ್ನಾತಕೋತ್ತರ ವ್ಯಾಸಂಗಕ್ಕೆ | 3,000/– | 6,000/– |
| 5 | ಮೆಡಿಕಲ್, ಇಂಜೀನಿಯರಿಂಗ್ ವ್ಯಾಸಂಗಕ್ಕೆ | 5,000/– | 10,000/– |

ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಪಡೆಯಲು ಅರ್ಜಿ ಸಲ್ಲಿಸಲು ಹಾಲಿ ಇರುವ ಅರ್ಹತೆಯಾದ ಸಾಮಾನ್ಯವರ್ಗ ಶೇ.50%, ಪ.ಜಾ/ಪ.ಪಂ ಶೇ.45% ಇರುವ ಪದ್ಧತಿಯನ್ನು ತೆಗೆಯಲು ಹಾಗೂ ಹಾಲಿ ಇರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಮೇಲಿನಂತೆ ಪರಿಷ್ಕರಿಸಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2. ಕಾರ್ಮಿಕರಿಗೆ ವೈಧ್ಯಕೀಯ ನೆರವು :**

ಹಾಲಿ ಇರುವ ಆರೋಗ್ಯ ತಪಾಸಣೆಗೆ ನಿಗಧಿಪಡಿಸಿದ ಧನಸಹಾಯ ₹200/– ರಿಂದ ₹600/– ಇದ್ದು, ಈ ಮೊತ್ತವು ತುಂಬ ಕಡಿಮೆ ಇರುವುದರಿಂದ ಇದನ್ನು ಪರಿಷ್ಕರಿಸಿ, ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಶ್ರೀ ಶಾಂತಕುಮಾರ್, ಇಂಟಕ್ ಹಾಗೂ ಶ್ರೀ ದೇಶಪಾಂಡೆ, ಬಿ.ಎಂ.ಎಸ್. ಇವರು ಅಧ್ಯಕ್ಷರನ್ನು ಕೋರಿದರು. ಇದಕ್ಕೆ ಉಳಿದ ಸದಸ್ಯರು ಧ್ವನಿಗೂಡಿಸಿದರು. ಈ ಬಗ್ಗೆ ಸಮಗ್ರ ಚರ್ಚೆ ನಡೆಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

ಕಾರ್ಮಿಕರ ಆರೋಗ್ಯ ತಪಾಸಣೆಗೆ ನಿಗಧಿಪಡಿಸಿದ ಧನಸಹಾಯ ₹200/– ರಿಂದ ₹600/– ಇರುತ್ತದೆ.

ಇದನ್ನು ₹500/– ರಿಂದ ₹1000/– ಎಂದು ಪರಿಷ್ಕರಿಸಿ ಹೆಚ್ಚಿಸಲು ನಿರ್ಣಯಿಸಲಾಯಿತು.

3. **ಕಾರ್ಮಿಕರು ಮತ್ತು ಅವಲಂಬಿತರಿಗೆ ಗಣಕ ಯಂತ್ರ ತರಬೇತಿ :**

ಹಾಲಿ ಇರುವ ಪದ್ಧತಿಯನ್ನೇ ಉಳಿಸಿಕೊಳ್ಳಲು ನಿರ್ಣಯಿಸಲಾಯಿತು.

**5. ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್ :**

ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್ ಖರೀದಿಸಲು ಹಾಲಿ ₹5,000/–ಗಳ ಧನ ಸಹಾಯವನ್ನು ನೀಡಲಾಗುತ್ತಿದೆ ಎಂದು ಕಲ್ಯಾಣ ಆಯುಕ್ತರು ಸಭೆಗೆ ತಿಳಿಸಿದರು. ಇದಕ್ಕೆ ಸದಸ್ಯರುಗಳಾದ ಶ್ರೀ ಶಾಂತಕುಮಾರ್, ಇಂಟಕ್ ಹಾಗೂ ಶ್ರೀ ನಾಗರಾಜ್, ಎ.ಐ.ಟಿ.ಯು.ಸಿ. ಇವರುಗಳು ಇದು ಅಂಗವಿಕಲರಿಗೆ ನೀಡುತ್ತಿರುವ ಧನಸಹಾಯ ತೀರ ಕಡಿಮೆ ಇದ್ದು, ಇದನ್ನು ಪರಿಷ್ಕರಿಸಿದ್ದಲ್ಲಿ ಅಂಗವಿಕಲ ಕಾರ್ಮಿಕರಿಗೆ ಅನುಕೂಲವಾಗುತ್ತದೆಂದು ಕೋರಿದರು.

ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್ ಖರೀದಿಸಲು ಹಾಲಿ ನೀಡುತ್ತಿರುವ ₹5,000/–ಗಳ ಧನ ಸಹಾಯವನ್ನು ಪರಿಷ್ಕರಿಸಿ ₹7,500/– ಗಳಿಗೆ ಹೆಚ್ಚಿಸಲು ನಿರ್ಣಯಿಸಲಾಯಿತು.

5. **ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀಸಲು ಧನ ಸಹಾಯ:**

ಹಾಲಿ ಇರುವ ಪದ್ಧತಿಯನ್ನೇ ಉಳಿಸಿಕೊಳ್ಳಲು ನಿರ್ಣಯಿಸಲಾಯಿತು.

**6. ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ:**

ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಹಾಲಿ ₹ 20,000/– ಧನಸಹಾಯವನ್ನು ಒಂದು ಸಂಘಟನೆಗೆ ವರ್ಷದಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ನೀಡಲಾಗುತ್ತಿರುವುದಾಗಿ (ಯಾವುದೇ ಮೂಲದಿಂದ ವೈದ್ಯಕೀಯ ಸೌಲಭ್ಯ ಪಡೆಯದಿರುವ ಉದ್ಯೋಗ ಸಂಸ್ಥೆಯ ಕಾರ್ಮಿಕರಿಗೆ ನಡೆಸುವ ಆರೋಗ್ಯ ತಪಾಸಣೆ ಶಿಬಿರಕ್ಕೆ ಧನ ಸಹಾಯ) ಕಲ್ಯಾಣ ಆಯುಕ್ತರು ಸಭೆಗೆ ತಿಳಿಸಿದರು. ಇದಕ್ಕೆ ಸದಸ್ಯರುಗಳಾದ ಶ್ರೀ ಶಾಂತಕುಮಾರ್, ಇಂಟಕ್ ಹಾಗೂ ಶ್ರೀ ನಾಗರಾಜ್, ಎ.ಐ.ಟಿ.ಯು.ಸಿ. ಇವರುಗಳು ವಾರ್ಷಿಕ ವೈದ್ಯಕೀಯ ತಪಾಸಣೆಗೆಂದು ನೀಡಲಾಗುತ್ತಿರುವ ಧನಸಹಾಯ ತೀರ ಕಡಿಮೆ ಇದ್ದು, ಈ ಬಾರಿ ನಡೆಸಲಾದ ವೈದ್ಯಕೀಯ ತಪಾಸಣೆ ಶಿಬಿರದಲ್ಲಿ ತಮಗೆ ₹1,50,000/–ಗಳಷ್ಟು ವೆಚ್ಚವಾಗಿರುತ್ತದೆಂದು, ಆದ್ದರಿಂದ ಹಾಲಿ ನೀಡುತ್ತಿರುವ ಧನಸಹಾಯ ₹20,000/–ಗಳನ್ನು ಪರಿಷ್ಕರಿಸಿ ಹೆಚ್ಚಿಸಿದಲ್ಲಿ ಕಾರ್ಮಿಕರಿಗೆ ಅನುಕೂಲವಾಗುತ್ತದೆಂದು ಅಧ್ಯಕ್ಷರನ್ನು ಕೋರಿದರು. ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

**ನಿರ್ಣಯ**

ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಒಂದು ಸಂಘಟನೆಗೆ ವರ್ಷದಲ್ಲಿ ಒಂದು ಬಾರಿ ಮಾತ್ರ ನೀಡಲಾಗುತ್ತಿರುವ ಧನಸಹಾಯ ಹಾಲಿ ₹20,000/– ಗಳನ್ನು ₹30,000/– ಗಳಿಗೆ ಪರಿಷ್ಕರಿಸಿ ಹೆಚ್ಚಿಸಲು ಹಾಗೂ ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಟನೆಗಳಿಗೆ ಹಾಲಿ ಇರುವ ₹40,000/– ಗಳಿಂದ ₹50,000/– ಗಳಿಗೆ ಪರಿಷ್ಕರಿಸಿ ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ಕಾರ್ಯಸೂಚಿ–5**

**ಬಾಗಲಗುಂಟೆಯಲ್ಲಿ ಇರುವ 30 ಗುಂಟೆ ನಿವೇಶನದಲ್ಲಿ ಸಭಾ ಭವನ/ ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ಕರ್ನಾಟಕ ಗೃಹ ಮಂಡಳಿಯಲ್ಲಿ ಠೇವಣಿಕರಿಸಿರುವ ಬಗ್ಗೆ.**

ಬಾಗಲಗುಂಟೆಯ ಮಂಜುನಾಥ ನಗರದಲ್ಲಿರುವ ಸರ್ವೆ ನಂ. 85ರಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸಂಬಂಧಿಸಿದ 7 ಎಕರೆ 20 ಗುಂಟೆ ಜಮೀನಿನ 30 ಗುಂಟೆ ಜಾಗದಲ್ಲಿ ಸಭಾ ಭವನ/ ಸಮುದಾಯ ಭವನ ನಿರ್ಮಿಸುವ ಬಗ್ಗೆ 81ನೇ ಮಂಡಳಿ ಸಭೆಯಲ್ಲಿ ಪರಿಗಣಿಸಿ ಸದರಿ ಕಟ್ಟಡದ ನಕ್ಷೆ ಹಾಗೂ front elevation ಸಹ ಅನುಮೋದಿಸಿ ₹ 4,94,86,359/– ಗಳ ಮೊತ್ತದಲ್ಲಿ ನಿರ್ಮಿಸಲು ಪರಿಗಣಿಸಿದೆ. ಹಾಗೂ ಸರ್ಕಾರದ ಕಾರ್ಯದರ್ಶಿಗಳು ದಿನಾಂಕ:07–09–2013 ರಂದು ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡಿರುತ್ತಾರೆ.

ಕರ್ನಾಟಕ ಗೃಹ ಮಂಡಳಿಯವರು ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ಒಟ್ಟು ಅಂದಾಜು ಮೊತ್ತ ₹ 5/– ಕೋಟಿಗಳಿಗೆ ಮತ್ತು ನಕ್ಷೆಯನ್ನು ಅನುಮೋದಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲು ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಅನುಮೋದಿಸಿ ಕಾರ್ಯಾದೇಶ ನೀಡಲು ಸೂಚಿಸಿರುವಂತೆ ದಿನಾಂಕ: 20–11–2015 ರಂದು ಬಾಗಲಗುಂಟೆಯ 30 ಗುಂಟೆ ಜಮೀನಿನಲ್ಲಿ ಸಭಾ ಭವನ/ ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ₹5/– ಕೋಟಿ ಮೊತ್ತದಲ್ಲಿ ಮೊದಲನೆ ಹಂತವಾಗಿ 1/3 ಭಾಗದ ಮೊತ್ತ ₹1,67,00,000/– ಗಳನ್ನು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇಲ್ಲಿ ಠೇವಣಿಕರಿಸಲಾಗಿದೆ. ಹಾಗೂ ಇ–ಸ್ಟಾಂಪ್ ಕಾಗದ ಪತ್ರದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ (ಪ್ರತಿ ಲಗತ್ತಿಸಿದೆ). ಸದರಿ ವಿಷಯವನ್ನು ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ನಿರ್ಣಯ**

ಈ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಸಿ ಬಾಗಲಗುಂಟೆಯಲ್ಲಿರುವ 30 ಗುಂಟೆ ಜಮೀನಿನಲ್ಲಿ ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇಲ್ಲಿ₹1,67,00,000/– ಗಳನ್ನು ಠೇವಣಿ ಕರಿಸಿರುವುದನ್ನು ಸಭೆಯು ಅವಲೋಕಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು. ಮತ್ತು ಸದರಿ ಕಟ್ಟಡದಲ್ಲಿ ಕಾರ್ಮಿಕರ ತಂಗುವಿಕೆಗೆ 5 ಕೊಠಡಿಗಳನ್ನು ನಿರ್ಮಿಸುವಂತೆ ನಕ್ಷೆ ಬದಲಾಯಿಸಲು ಒಪ್ಪಲಾಯಿತು.

**ಕಾರ್ಯಸೂಚಿ–6**

**ಶ್ರೀರಂಗಪಟ್ಟಣ ತಾಲೂಕು, ಹೊಂಗಳ್ಳಿ ಗ್ರಾಮ, ಸರ್ವೆ ನಂ. 341 ರಲ್ಲಿರುವ 4 ಎಕರೆ ಜಮೀನಿನಲ್ಲಿ ಸಮುದಾಯ ಭವನ ನಿರ್ಮಿಸುವ ಬಗ್ಗೆ.**

ದಿನಾಂಕ:23–01–2016 ರಂದು ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸೇರಿದ ಶ್ರೀರಂಗಪಟ್ಟಣ ತಾಲ್ಲೂಕು, ಹೊಂಗಳ್ಳಿ ಗ್ರಾಮ, ಸರ್ವೆ ನಂ. 341 ರಲ್ಲಿರುವ 4 ಎಕರೆ ಜಮೀನಿಗೆ ಭೇಟಿ ನೀಡಿ ಪರಿಶೀಲನೆ ಮಾಡಿರುತ್ತಾರೆ. ಈ ಜಾಗದಲ್ಲಿ ಪ್ರಾಥಮಿಕವಾಗಿ ಲ್ಯಾಂಡ್ ಸ್ಕೇಪಿಂಗ್ ಮಾಡಿಸಿ, ಇರುವ 4 ಎಕರೆಯಲ್ಲಿ ಮೊದಲು 1 ಎಕರೆ ಜಾಗದಲ್ಲಿ ಸಮುದಾಯ ಭವನವನ್ನು ನಿರ್ಮಿಸಲು ಸೂಚನೆಯನ್ನು ನೀಡಿರುತ್ತಾರೆ. ಆದ್ದರಿಂದ ಆ ಜಮೀನಿನಲ್ಲಿ ಲ್ಯಾಂಡ್ ಸ್ಕೇಪಿಂಗ್ ಹಾಗೂ ಸರ್ಕಾರದ ಅಧೀನದಲ್ಲಿ ಬರುವ ಯಾವ ಇಲಾಖೆಯಿಂದ ಸಮುದಾಯ ಭವನ ನಿರ್ಮಿಸಲು ಅಂದಾಜು ದರಪಟ್ಟಿ ಪಡೆಯಬೇಕೆಂಬುದರ ಬಗ್ಗೆ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಹಾಗೂ ನಿರ್ಣಯ**

ಶ್ರೀ ನಾಗರಾಜ್, ಕಾರ್ಯದರ್ಶಿ, ಎಐಟಿಯುಸಿ ಇವರು ಶ್ರೀರಂಗಪಟ್ಟಣ ತಾಲೂಕು, ಹೊಂಗಳ್ಳಿ ಗ್ರಾಮದಲ್ಲಿರುವ 4 ಎಕರೆ ಜಮೀನಿನಲ್ಲಿ ಮೊದಲು 1 ಎಕರೆ ಜಾಗದಲ್ಲಿ ಸಮುದಾಯ ಭವನದ ಜೊತೆ ಅತಿಥಿ ಗೃಹವನ್ನು ಕೂಡ ನಿರ್ಮಿಸುವಂತೆ ಕೋರಿದರು. ಈ ಸಮಯದಲ್ಲಿ ಕಲ್ಯಾಣ ಆಯುಕ್ತರು ಸರ್ಕಾರದ ಅಧೀನದಲ್ಲಿ ಬರುವ ಯಾವುದಾದರು ಕಟ್ಟಡ ನಿರ್ಮಿಸುವ ಸಂಸ್ಥೆಯನ್ನು ಗುರುತಿಸಬೇಕಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಆವಾಗ ಮಾನ್ಯ ಅಧ್ಯಕ್ಷರು ಸಂಸ್ಥೆಯ ಆಯ್ಕೆಯ ಬಗ್ಗೆ ಕಡತವನ್ನು ಸಲ್ಲಿಸುವಂತೆ ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರು ಸರ್ಕಾರದ ಅಧೀನದಲ್ಲಿ ಬರುವ ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಮಾನ್ಯ ಅಧ್ಯಕ್ಷರೆ ಆಯ್ಕೆ ಮಾಡಬೇಕೆಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ಕಾರ್ಯಸೂಚಿ-7**

**ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ಪಟ್ಟಣದಲ್ಲಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ನಿವೇಶನದಲ್ಲಿರುವ ಕಟ್ಟಡ ಕೆಡವಿ ಹೊಸ ಕಟ್ಟಡ ನಿರ್ಮಿಸುವ ಬಗ್ಗೆ.**

**ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಡಿವಿಜನ್ ನಂ.1 ಆಸ್ತಿ ಸಂಖ್ಯೆ 1/676 ರಲ್ಲಿರುವ ಸುಮಾರು 15,494 ಚ.ಅ ಜಮೀನಿದ್ದು, ಸದರಿ ಜಮೀನಿನಲ್ಲಿ 1076 ಚ.ಅ ವಿಸ್ತೀರ್ಣದ ಒಂದು ಕಟ್ಟಡವಿರುತ್ತದೆ. ಇದರನುಸಾರ ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ಪಟ್ಟಣದಲ್ಲಿರುವ ಮಂಡಳಿಯ ನಿವೇಶನದಲ್ಲಿರುವ ಕಟ್ಟಡದಲ್ಲಿ ಕಾರ್ಮಿಕ ನಿರೀಕ್ಷಕರ ಕಛೇರಿ ಇದ್ದು, ಶಿಥಿಲಾವಸ್ಥೆಯಲ್ಲಿರುತ್ತದೆ ಎಂದು ಹಾಗೂ ಸದರಿ ಸ್ವತ್ತನ್ನು ಸಾರ್ವಜನಿಕರಿಂದ ಅತಿಕ್ರಮಣಗೊಳ್ಳುವುದನ್ನು ಕಾಪಾಡಲು ನಿವೇಶನದ ಸುತ್ತ ಕಾಂಪೌಂಡನ್ನು ನಿರ್ಮಿಸುವಂತೆ ದಿನಾಂಕ: 25-11-2015 ರ ಪತ್ರದಲ್ಲಿ ಕಾರ್ಮಿಕ ಅಧಿಕಾರಿಯವರು ಪತ್ರದ ಮುಖೇನ ಕೋರಿರುತ್ತಾರೆ.**

ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ನಡವಳಿ ದಿನಾಂಕ: 01-02-2014 ರ ಪತ್ರದಲ್ಲಿ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಒಂದು ಕಲ್ಯಾಣ ಮಂಟಪವನ್ನು ನಿರ್ಮಾಣ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲು ಕೋರಿದ್ದರು. ಈ ವಿಷಯವನ್ನು ದಿನಾಂಕ: 17-01-2014 ರಂದು ನಡೆದ 81ನೇ ಮಂಡಳಿ ಸಭೆಯಲ್ಲಿ ಕಾರ್ಯಸೂಚಿಯಲ್ಲಿರುವ ವಿಷಯವನ್ನು ಪ್ರಸ್ತಾಪಿಸಿದಾಗ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು ದಾಂಡೇಲಿಯಲ್ಲಿರುವ ಮಂಡಳಿ ಜಾಗವನ್ನು ಖುದ್ದು ಪರಿಶೀಲನೆ ಮಾಡಿ ಸರ್ಕಾರದ ಕಾರ್ಯದರ್ಶಿಗಳೊಡನೆ ಚರ್ಚಿಸಿ ನೂತನ ಕಟ್ಟಡ ಕಟ್ಟುವ ಬಗ್ಗೆ ತಿರ್ಮಾನಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ತಿಳಿಸಿದಾಗ ಸದಸ್ಯರು ಸರ್ವಾನುಮತದಿಂದ ಸಭೆಯಲ್ಲಿ ಒಪ್ಪಿಗೆ ನೀಡಿದರು.

ಇದರನುಸಾರ ದಾಂಡೇಲಿಯಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಕೆಡವಿ, 18 ಗುಂಟೆ ಜಾಗದಲ್ಲಿ ಸುಸಜ್ಜಿತವಾದ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಕಟ್ಟಡವನ್ನು ನಿರ್ಮಿಸಲು, ಅಂದಾಜು ದರ ಪಟ್ಟಿ ಹಾಗೂ ನೀಲಿ ನಕ್ಷೆ ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರು ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಗುರುತಿಸಿ ಅನುಮೋದಿಸುವ ಬಗ್ಗೆ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ಪಟ್ಟಣದಲ್ಲಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಶಿಥಲಾವಸ್ಥೆಯಲ್ಲಿರುವ ಕಟ್ಟಡವನ್ನು ಕೆಡವಿ 18 ಗುಂಟೆ ಜಾಗದಲ್ಲಿ ಸುಸಜ್ಜಿತವಾದ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಮತ್ತು ಅಥಿತಿ ಗೃಹವನ್ನು ನಿರ್ಮಿಸುವ ಕಾಮಗಾರಿಗೆ ಅಂದಾಜು ದರಪಟ್ಟಿ ಹಾಗೂ ನೀಲಿ ನಕ್ಷೆ ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಗುರುತಿಸಿ ಅನುಮೋದಿಸುವ ಬಗ್ಗೆ ಮಾನ್ಯ ಅಧ್ಯಕ್ಷರೆ ನಿರ್ಣಯ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ಕಾರ್ಯಸೂಚಿ-8**

**ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣದ ಕಟ್ಟಡ ನಿರ್ಮಿಸುವ ಬಗ್ಗೆ.**

ಶ್ರೀ ಎಸ್. ನಾಗರಾಜು, ಕಾರ್ಯದರ್ಶಿ, ಆಲ್ ಇಂಡಿಯಾ ಟ್ರೇಡ್ ಯುನಿಯನ್ ಕಾಂಗ್ರೆಸ್ ರವರು ದಿನಾಂಕ: 20-08-2015 ರಿಂದ 25-08-2015 ರವರೆಗೆ ರಾಯಚೂರು ವಿಭಾಗದಲ್ಲಿ ಎಐಟಿಯುಸಿ ಗೆ ಸೇರಿದ ಕಾರ್ಮಿಕ ಸಂಘಗಳಲ್ಲಿ ಪ್ರವಾಸಗೊಂಡಂತ ಸಮಯದಲ್ಲಿ ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನಕ್ಕೆ ಭೇಟಿ ನೀಡಿದಾಗ ಸದರಿ ಸ್ಥಳದಲ್ಲಿ ಸುಮಾರು 8 ಚದರ ಕಟ್ಟಡ ಇರುತ್ತದೆ. ಉಳಿದ ಜಾಗದಲ್ಲಿ ಯಾವುದೇ ನಿರ್ವಹಣೆ ಇಲ್ಲದಿರುವ ಕಾರಣ ಜಾಲಿ ಗಿಡ ಬೆಳದಿರುತ್ತದೆ ಎಂದು ಸದರಿ ಆಸ್ತಿಯ ಒಟ್ಟು ಮೌಲ್ಯ ಅಂದಾಜು ಒಂದು ಕೋಟಿ ರೂಪಾಯಿ ಆಗುತ್ತದೆ. ಹಾಗೂ ಅದರಲ್ಲಿ ಈಗಾಗಲೇ ಸುತ್ತಲು ಮುಳ್ಳುತಂತಿ ಕಾಂಪೌಂಡ್‌ಯಿದ್ದು ಸ್ಥಳ ಒತ್ತುವರಿ ಆಗಿರುವುದಿಲ್ಲ. ಆದರೆ ಯಾವುದೇ ಉಪಯೋಗಕ್ಕೂ ಬರುತ್ತಿಲ್ಲ. ರಾಯಚೂರು ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಬಾಡಿಗೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕಟ್ಟಡ ಕಾರ್ಮಿಕ ಮಂಡಳಿಯ ನೌಕರರು ಸಹ ಬಾಡಿಗೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆದ್ದರಿಂದ ನಮ್ಮ ಮಂಡಳಿಯ ಜಮೀನಿನಲ್ಲಿ ಕಟ್ಟಡ ಕಟ್ಟಿ ಕಾರ್ಮಿಕ ಇಲಾಖೆ ಹಾಗೂ ಕಟ್ಟಡ ಕಾರ್ಮಿಕ ಮಂಡಳಿಗೆ ಬಾಡಿಗೆಗೆ ಕೊಡಬಹುದೆಂದು ಮತ್ತು ನಮ್ಮ ಮಂಡಳಿಯ ನೌಕರರು ಸಹ ನಮ್ಮ ಕಟ್ಟಡದಲ್ಲೇ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಸದರಿ ವಿಷಯವನ್ನು ಮುಂದಿನ ಮಂಡಳಿಯ ಸಭೆಯಲ್ಲಿ ಮಂಡಿಸಬೇಕೆಂದು ಕೋರಿರುತ್ತಾರೆ.

**ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸೇರಿದ ಸರ್ವೆ ನಂ. 852/2, 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಕಟ್ಟಡವನ್ನು ನಿರ್ಮಿಸಲು ಸೂಚಿಸಿರುವಂತೆ, ಅಂದಾಜು ದರಪಟ್ಟಿ ಹಾಗೂ ನೀಲಿ ನಕ್ಷೆ ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರು ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಗುರುತಿಸಿ ಅನುಮೋದಿಸುವ ಬಗ್ಗೆ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.**

**ಚರ್ಚೆ ಮತ್ತು ನಿರ್ಣಯ**

ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣದ ಕಟ್ಟಡ ನಿರ್ಮಿಸುವ ಬಗ್ಗೆ ಶ್ರೀ ನಾಗರಾಜ್, ಎ.ಐಟಿಯುಸಿ ಮಾತನಾಡಿ, ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಬೇಕೆಂದು ತಿಳಿಸಿದರು. ಇದಕ್ಕೆ ಪೂರಕವಾಗಿ ಶ್ರೀ ದೇಶಪಾಂಡೆ, ಬಿ.ಎಂ.ಎಸ್., ಇವರು ಪ್ರಾಜೆಕ್ಟ್‌ನ ಒಟ್ಟು ಖರ್ಚಿನ ಶೇ.10% ರಷ್ಟಾದರು ಸರ್ಕಾರದಿಂದ ಅನುದಾನ ಕೊಡಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು. ಇದಕ್ಕೆ ಅಧ್ಯಕ್ಷರು ರಾಜ್ಯದಲ್ಲಿ ತೀವ್ರ ಬರಗಾಲ ಇರುವುದರಿಂದ ಸಧ್ಯಕ್ಕೆ ಸಾಧ್ಯವಾಗುವುದಿಲ್ಲವೆಂದು ಮುಂದಿನ ಆರ್ಥಿಕ ವರ್ಷದಲ್ಲಿ ಈ ಬಗ್ಗೆ ಪ್ರಯತ್ನಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮುಂದುವರೆದು ಶ್ರೀ ಮಹಾಂತೇಶ್, ರಾಜ್ಯ ಕಾರ್ಯದರ್ಶಿ, ಸಿಐಟಿಯು, ಇವರು ಮಾತನಾಡಿ, ಮಂಡಳಿಯ ಹಣವನ್ನು ಕಾರ್ಮಿಕ ಕಲ್ಯಾಣ ಯೋಜನೆಗಳಿಗೆ ಮಾತ್ರ ಉಪಯೋಗಿಸಬೇಕೆಂದು ಮಂಡಳಿಯಿಂದ ನಿರ್ಮಿಸುವ ಕಟ್ಟಡ ಮತ್ತು ಸಮುದಾಯ ಭವನಗಳ ಕಾಮಗಾರಿಯ ವೆಚ್ಚವನ್ನು ಸರ್ಕಾರದ ಅನುದಾನ ಪಡೆದು ನಿರ್ಮಿಸಲು ಪ್ರಯತ್ನ ಮಾಡಬೇಕೆಂದು ಕೋರಿದರು. ಇದಕ್ಕೆ ಅಧ್ಯಕ್ಷರು ಮುಂದಿನ ವರ್ಷ ಪ್ರಯತ್ನಿಸೋಣವೆಂದು ಸಭೆಗೆ ತಿಳಿಸಿದರು. ಹಾಗೂ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಮತ್ತು ಅಥಿತಿ ಗೃಹವನ್ನು ನಿರ್ಮಿಸುವ ಕಾಮಗಾರಿಗೆ ಅಂದಾಜು ದರಪಟ್ಟಿ ಹಾಗೂ ನೀಲಿ ನಕ್ಷೆ ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಗುರುತಿಸಿ ಅನುಮೋದಿಸುವ ಬಗ್ಗೆ ಮಾನ್ಯ ಅಧ್ಯಕ್ಷರೆ ನಿರ್ಣಯ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**<u>ಕಾರ್ಯಸೂಚಿ-9</u>**

**ಗದಗದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನದ ಸುತ್ತ ಆವರಣ ಗೋಡೆ ನಿರ್ಮಿಸುವ ಬಗ್ಗೆ.**

82ನೇ ಮಂಡಳಿ ಸಭೆಯಲ್ಲಿ ಗದಗದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನದ ಕಟ್ಟಡದ ಸುತ್ತ ಆವರಣ ಗೋಡೆ ನಿರ್ಮಿಸಲು ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ನಿರ್ಣಯಿಸಲಾಗಿತ್ತು. ಆದರೆ ಸಿವಿಲ್ ಕಾಮಗಾರಿಯಾಗಿದ್ದರಿಂದ ಟೆಂಡರ್ ಕರೆಯುವಾಗ ಮತ್ತು ಕಾಮಗಾರಿಗೆ ಉಸ್ತುವಾರಿ ನೋಡಿಕೊಳ್ಳಲು ಯಾರು ಅನುಭವಸ್ಥ ಸಿವಿಲ್ ಇಂಜಿನಿಯರ್ ಸಿಗದಿದ್ದರಿಂದ ನಿರ್ಮಿತ ಕೇಂದ್ರ ಗದಗ ಜಿಲ್ಲೆ ಗದಗ ರವರಿಗೆ ಆವರಣ ಗೋಡೆ ನಿರ್ಮಿಸುವ ಕಾಮಗಾರಿಗೆ ಅಂದಾಜು ದರ ಪಟ್ಟಿ ನೀಡಲು ಕೋರಲಾಗಿತ್ತು. ಸದರಿ ಯೋಜನಾ ವ್ಯವಸ್ಥಾಪಕರು ನಿರ್ಮಿತ ಕೇಂದ್ರ ಗದಗ ರವರು ಅಂದಾಜು ದರಪಟ್ಟಿಯನ್ನು ಕಳುಹಿಸಿದ್ದು, ಅಂದಾಜು ದರಪಟ್ಟಿ ಮೊತ್ತ ₹10.53 ಲಕ್ಷಗಳಿಗೆ ನೀಡಿರುತ್ತಾರೆ. ಆದರೆ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಗದಗ ರವರು ಆವರಣ ಗೋಡೆ ನಿರ್ಮಿಸುವ ಕಾಮಗಾರಿಗೆ ₹7/- ಲಕ್ಷಗಳ ಅಂದಾಜು ದರಪಟ್ಟಿಯನ್ನು ನೀಡಿದ್ದು, ನಿರ್ಮಿತ ಕೇಂದ್ರದವರು ನೀಡಿರುವ ದರಪಟ್ಟಿಕ್ಕಿಂತ ಲೋಕೋಪಯೋಗಿ ಇಲಾಖೆಯವರು ನೀಡಿರುವ ದರಪಟ್ಟಿ ಕಡಿಮೆ ಇರುತ್ತದೆ. ಆದ್ದರಿಂದ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ ವಿಭಾಗ, ಗದಗ ರವರಿಗೆ ಸಮುದಾಯ ಭವನದ ಸುತ್ತ ಆವರಣ ಗೋಡೆ ನಿರ್ಮಿಸುವ ಕಾಮಗಾರಿಗೆ ₹ 7/- ಲಕ್ಷ ಠೇವಣಿ ಇಟ್ಟು ಕಾಮಗಾರಿ ಮಾಡಿಸುವ ಬಗ್ಗೆ ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಗದಗದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನದ ಸುತ್ತ ಆವರಣ ಗೋಡೆ ನಿರ್ಮಿಸುವ ಬಗ್ಗೆ ಚರ್ಚೆಯಾಗಿ ಆವರಣ ಗೋಡೆ ನಿರ್ಮಿಸುವ ಕಾಮಗಾರಿಗೆ ಕಡಿಮೆ ದರಪಟ್ಟಿ ನೀಡಿರುವ ಲೋಕೋಪಯೋಗಿ ಬಂದರು ಮತ್ತು ಓಳನಾಡು ಜಲ ಸಾರಿಗೆ ಇಲಾಖೆ, ಉಪ ವಿಭಾಗ, ಗದಗ ಇವರಿಗೆ ₹7.00 ಲಕ್ಷಗಳನ್ನು ಠೇವಣಿ ಕರಿಸಿ ಸಮುದಾಯ ಭವನದ ಸುತ್ತ ಆವರಣ ನಿರ್ಮಿಸುವ ಬಗ್ಗೆ ಕ್ರಮವಹಿಸಿ ಆದಷ್ಟು ಬೇಗನೆ ಪ್ರಕ್ರಿಯೆ ಪೂರ್ಣಗೊಳಿಸಲು ಕಲ್ಯಾಣ ಆಯುಕ್ತರಿಗೆ ಅಧ್ಯಕ್ಷರು ಸೂಚಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

**<u>ಕಾರ್ಯಸೂಚಿ-10</u>**

**ವಿಜಯಪುರ ಸಮುದಾಯ ಭವನಕ್ಕೆ ಲಿಫ್ಟ್ ಅಳವಡಿಸಲು ಹಾಗೂ ಲಿಫ್ಟ್ ರೂಂ ಕಾಮಗಾರಿ ಬಗ್ಗೆ.**

83ನೇ ಮಂಡಳಿ ಸಭೆಯಲ್ಲಿ ವಿಜಯಪುರದಲ್ಲಿ ನಿರ್ಮಿಸಿರುವ ಸಮುದಾಯ ಭವನಕ್ಕೆ ಲಿಫ್ಟ್ ಅಳವಡಿಸಲು ಟೆಂಡರ್ ಕರೆದು ಮಾಡಿಸುವ ಬಗ್ಗೆ ನಿರ್ಣಯಿಸಲಾಗಿತ್ತು. ಆದರೆ ವಿಜಯಪುರದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನದಲ್ಲಿ ಲಿಫ್ಟ್ ಅಳವಡಿಸಲು ಲಿಫ್ಟ್ ರೂಂ ಇರುವುದಿಲ್ಲ. ಮೊದಲು ಲಿಫ್ಟ್ ರೂಂ ನ ಕಾಮಗಾರಿ ಮಾಡಿಸಿ ನಂತರ ಲಿಫ್ಟ್ ಅಳವಡಿಸಬೇಕಾಗಿರುತ್ತದೆ. ಸದರಿ ಸಮುದಾಯ ಭವನ ಕಟ್ಟಡವನ್ನು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ವಿಜಯಪುರ ರವರು ನಿರ್ಮಿಸಿರುತ್ತಾರೆ. ಆದ್ದರಿಂದ ಸದರಿಯವರಿಗೆ ಲಿಫ್ಟ್ ರೂಂ ಹಾಗೂ ಲಿಫ್ಟ್ ಅಳವಡಿಸುವ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವನ್ನು ನೀಡಲು ಕೋರಲಾಗಿತ್ತು. ಅದರಂತೆ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳಜಲ ಸಾರಿಗೆ ಇಲಾಖೆ ವಿಭಾಗ, ವಿಜಯಪುರ ರವರು ದಿನಾಂಕ: 11-01-2016 ರ ಪತ್ರದ ಜೊತೆ ನಕ್ಷೆ ಹಾಗೂ ಅಂದಾಜು ದರಪಟ್ಟಿಯನ್ನು ವಿಜಯಪುರ ಸಮುದಾಯ ಭವನಕ್ಕೆ ಲಿಫ್ಟ್ ಕೋಣೆ ನಿರ್ಮಾಣ ಹಾಗೂ ಎಲಿವೇಟರ್ ಅಳವಡಿಸುವ ಕಾಮಗಾರಿಯ ಅಂದಾಜು ಪತ್ರಿಕೆಯನ್ನು 2015-16 ನೇ ಸಾಲಿನ ಬೆಳಗಾವಿ ವೃತ್ತದ ದರಪಟ್ಟಿಯಂತೆ ₹23.50 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ ಎಂದು ಕಾಮಗಾರಿಗಾಗಿ ₹23.50 ಲಕ್ಷ ಅನುದಾನವನ್ನು ಠೇವಣಿ ಕರಿಸಿ ಅಂದಾಜು ಪತ್ರಿಕೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅವರು ನೀಡಿರುವ ಅಂದಾಜು ಪತ್ರಿಕೆ ಸಮೇತ ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ವಿಜಯಪುರ ಸಮುದಾಯ ಭವನಕ್ಕೆ ಲಿಫ್ಟ್ ಅಳವಡಿಸಲು ಹಾಗೂ ಲಿಫ್ಟ್ ರೂಂ ಕಾಮಗಾರಿ ಬಗ್ಗೆ ಚರ್ಚೆಯಾಗಿ ವಿಜಯಪುರದ ಸಮುದಾಯ ಭವನಕ್ಕೆ ಲಿಫ್ಟ್ ರೂಂ ಹಾಗೂ ಲಿಫ್ಟ್ ಅಳವಡಿಸುವ ಕಾಮಗಾರಿಗೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಓಳ ಜಲ ಸಾರಿಗೆ ಇಲಾಖೆ, ವಿಭಾಗ, ವಿಜಯಪುರ ಇವರಿಗೆ ₹ 23.50 ಲಕ್ಷವನ್ನು ಠೇವಣಿ ಕರಿಸಲು ಹಾಗೂ ಕಲ್ಯಾಣ ಆಯುಕ್ತರಿಗೆ ಮೆ॥ ಓಟೀಸ್ ಲಿಫ್ಟ್ ಅನ್ನೆ ಅಳವಡಿಸುವಂತೆ ಲೋಕೋಪಯೋಗಿ ಇಲಾಖೆಗೆ ತಿಳಿಸುವಂತೆ, ಮಾನ್ಯ ಅಧ್ಯಕ್ಷರು ಸೂಚಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಸದರಿ ಕಾಮಗಾರಿಗೆ ಠೇವಣಿ ಕರಿಸಿ ಮಾಡುವ ಬಗ್ಗೆ ಸರ್ವಾನುಮತದಿಂದ ಸಭೆಯು ನಿರ್ಣಯಿಸಿತು.

## ಕಾರ್ಯಸೂಚಿ –11

### ವಿಜಯಪುರ ಸಮುದಾಯ ಭವನದ 2ನೇ ಮಹಡಿಯಲ್ಲಿ ಬಾಡಿಗೆಯಲ್ಲಿರುವ ಕಾರ್ಮಿಕ ಇಲಾಖೆ, ಕಾರ್ಮಿಕ ಅಧಿಕಾರಿ–1&2 ರವರು ಅಲ್ಯುಮಿನಿಯಂ ಪಾರ್ಟಿಷನ್ ಮಾಡಿಸಿಕೊಡುವಂತೆ ಕೋರಿರುವ ಬಗ್ಗೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಸಮುದಾಯ ಭವನ ವಿಜಯಪುರ ಇಲ್ಲಿನ ಎರಡನೇಯ ಮಹಡಿಯಲ್ಲಿ ಕಾರ್ಮಿಕ ಇಲಾಖೆಯ ಕಛೇರಿಗೆ ಪಾರ್ಟಿಷನ್/ ಕಂಪಾರ್ಟ್‌ಮೆಂಟ್ ಮಾಡುವುದು ಅತಿ ಅವಶ್ಯಕವಾಗಿರುವುದರಿಂದ ಸದರಿ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳಿಗಾಗಿ:

1) ಕಾರ್ಮಿಕ ಅಧಿಕಾರಿಗಳ ಕಛೇರಿ ಉಪ ವಿಭಾಗ 1&2 ಕ್ಕೆ ಅಧಿಕಾರಿಗಳ ಛೇಂಬರ್ ಹಾಗೂ ಸಿಬ್ಬಂದಿಗಳಿಗೆ ಪ್ರತ್ಯೇಕ ಕೌಂಟರ್‌ಗಳನ್ನು ನಿರ್ಮಿಸುವುದು.
2) ಕಾರ್ಮಿಕ ನಿರೀಕ್ಷಕರ ಕಛೇರಿ 1&2ನೇಯ ವೃತ್ತಗಳಿಗೆ ಪ್ರತ್ಯೇಕ ಛೇಂಬರ್ ನಿರ್ಮಿಸುವುದು ಹಾಗೂ ಸಿಬ್ಬಂದಿಗಳಿಗೆ ಪ್ರತ್ಯೇಕ ಕೌಂಟರ್‌ಗಳನ್ನು ನಿರ್ಮಿಸುವುದು.
3) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸಿಬ್ಬಂದಿಗಳಿಗೆ ಕೌಂಟರ್ ನಿರ್ಮಿಸುವುದು.
4) ಎನ್.ಪಿ.ಎಸ್. ಲೈಟ್ ಸ್ವಾವಲಂಬನ ಕಛೇರಿಯ ಸಿಬ್ಬಂದಿಗಳಿಗೆ ಕೌಂಟರ್ ನಿರ್ಮಿಸುವುದು.
5) ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಸಿಬ್ಬಂದಿಗಳಿಗೆ ಕೌಂಟರ್ ನಿರ್ಮಿಸುವುದು.

ಇದರ ಅವಶ್ಯಕತೆ ಇರುವುರಿಂದ ಪಾರ್ಟಿಷನ್ ಮಾಡಿಕೊಡುವಂತೆ ಕೋರಿರುತ್ತಾರೆ. ಸದರಿ ಇಲಾಖೆಯವರು ಕೋರಿರುವ ಪಾರ್ಟಿಷನ್ ಮಾಡಿಸಿಕೊಟ್ಟು ನಂತರ ಅವರಿಂದ ಖರ್ಚಾಗಿರುವ ಮೊತ್ತವನ್ನು ಹಿಂದಿರುಗಿಸಲು ಒಪ್ಪಿದ ಪಕ್ಷದಲ್ಲಿ ಮಾತ್ರ ಪಾರ್ಟಿಷನ್‌ನ ಕಾಮಗಾರಿ ಮಾಡಿಸಿಕೊಡುವುದೆ ಎಂಬುದರ ಬಗ್ಗೆ ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

### ಚರ್ಚೆ ಮತ್ತು ನಿರ್ಣಯ

ಇದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ, ಶ್ರೀ ಶಾಂತಕುಮಾರ್, ಇಂಟಕ್ ಮತ್ತು ಶ್ರೀ ನಾಗರಾಜ್ ಎ.ಐ.ಟಿ.ಯು.ಸಿ., ಮತ್ತು ಶ್ರೀ ದೇಶಪಾಂಡೆ, ಬಿ.ಎಂ.ಎಸ್., ಮಾತನಾಡಿ, ಪಾರ್ಟಿಷನ್ ಮಾಡಿದಲ್ಲಿ ಬಾಡಿಗೆಯನ್ನು ಹೆಚ್ಚು ಮಾಡಬೇಕೆಂದು ಇದಕ್ಕೆ ಒಪ್ಪದಿದ್ದಲ್ಲಿ ಅವರಿಗೆ ಬಾಡಿಗೆದಾರರಿಗೆ ಪಾರ್ಟಿಷನ್ ಮಾಡಿಕೊಳ್ಳಲು ತಿಳಿಸಲು ಕೋರಿದರು. ಕಲ್ಯಾಣ ಆಯುಕ್ತರು ಮಾತನಾಡಿ, ಈ ಕಟ್ಟಡವನ್ನು ಕಾರ್ಮಿಕ ಅಧಿಕಾರಿ, ಉಪ ವಿಭಾಗ–1 ಮತ್ತು 2 ಕಛೇರಿಗೆ ನೀಡಲಾಗಿದ್ದು, ಸರ್ಕಾರಿ ಕಛೇರಿಯಾಗಿರುವುದರಿಂದ ಮುಂಗಡವನ್ನು ಸಹ ಪಡೆದಿರುವುದಿಲ್ಲವೆಂದು ತಿಳಿಸಿದರು. ಮಂಡಳಿಯ ಲೆಕ್ಕಾಧಿಕಾರಿಗಳು ಮಧ್ಯ ಪ್ರವೇಶಿಸಿ, ಮಾತನಾಡಿ, ಪೀಣ್ಯದಲ್ಲಿರುವ ಸಮುದಾಯ ಭವನದಲ್ಲಿ ಕಾರ್ಮಿಕ ಇಲಾಖೆಗೆ ಪಾರ್ಟಿಷನ್ ಮಾಡಿ, ಬಾಡಿಗೆಗೆ ನೀಡಲಾಗಿತ್ತು. ಆದರೆ ಇದರ ಬಾಬ್ತು ಇನ್ನು ₹9.00 ಲಕ್ಷಗಳ ಬಾಡಿಗೆ ಮತ್ತು ಪಾರ್ಟಿಷನ್ ವೆಚ್ಚ ಪಾವತಿ ಮಾಡಲು ಬಾಕಿ ಇರುವುದಾಗಿ ಸಭೆಗೆ ತಿಳಿಸಿದಾಗ ಸದಸ್ಯರೆಲ್ಲರು ಬಾಡಿಗೆಯಲ್ಲಿರುವ ಇಲಾಖೆಯ ಪಾರ್ಟಿಷನ್ ಮಾಡಿಕೊಳ್ಳಲು ಸಂಬಂಧಿಸಿದವರಿಗೆ ತಿಳಿಸುವಂತೆ ಮಂಡಳಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

## ಕಾರ್ಯಸೂಚಿ–12

**ಮಂಡಳಿಯ ನೌಕರರ ಪಿಂಚಣಿ ನಿಧಿಗೆ ₹5/– ಕೋಟಿ ನಿಶ್ಚಿತ ಠೇವಣಿ ಇರಿಸಿ ಬಡ್ಡಿಯಿಂದ ಬರುವ ಮೊತ್ತವನ್ನು ಪಿಂಚಣಿ ನಿಧಿಗೆ ಉಪಯೋಗಿಸಿಕೊಳ್ಳಲು ಮಂಡಳಿ ಸಭೆಯ ಅನುಮೋದನೆ ಕೋರುವ ಬಗ್ಗೆ.**

ಸರ್ಕಾರಿ ಆದೇಶ ಸಂಖ್ಯೆ: ಕಾಇ–349/ಎಲ್‌ಇಟಿ/2000, ಬೆಂಗಳೂರು ದಿನಾಂಕ: 27–06–2000 ರ ಪ್ರಕಾರ ಮಂಡಳಿ ನೌಕರರ ಮೂಲ ವೇತನದಿಂದ ಶೇ.8 1/3 ರಷ್ಟು ಮೊತ್ತವನ್ನು ಕಡಿತಗೊಳಿಸಿ ಪಿಂಚಣಿ ಖಾತೆಗೆ ಜಮೆ ಮಾಡುವುದರ ಜೊತೆಗೆ ಆ ಪಿಂಚಣಿ ನಿಧಿಯಲ್ಲಿರುವ ಮೊತ್ತದಿಂದ ಬರುವ ಬಡ್ಡಿಯಲ್ಲಿ ಮಂಡಳಿಯಲ್ಲಿ ನಿವೃತ್ತರಾಗುವ ನೌಕರರಿಗೆ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನೀಡಲಾಗುತ್ತಿದೆ.

ಈಗಾಗಲೇ 35 ನೌಕರರು ನಿವೃತ್ತಿಗೊಂಡಿದ್ದು, ಮುಂದಿನ ಐದು ವರ್ಷಗಳಲ್ಲಿ ಮಂಡಳಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಲ್ಲಿ ಶೇ. 50% ರಷ್ಟು ನೌಕರರು ನಿವೃತ್ತಿಗೊಳ್ಳಲಿರುವುದರಿಂದ ಈ ನೌಕರರಿಗೆ ನಿವೃತ್ತಿ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನೀಡಬೇಕಾಗಿರುತ್ತದೆ. ಸದರಿ ಮೊತ್ತವು ಮುಂದಿನ ದಿನಗಳಲ್ಲಿ ಪಿಂಚಣಿ ನೀಡಲು ಸಾಲದಿರುವುದರಿಂದ ಮಂಡಳಿಯಲ್ಲಿ ಇರುವ ಅನ್‌ಕ್ಲೈಮ್ಡ್ ಮೊತ್ತ ಪಿಂಚಣಿ ನಿಧಿಯನ್ನು ಆರ್ಥಿಕವಾಗಿ ಸದೃಢಗೊಳಿಸಬೇಕಾಗಿರುವುದರಿಂದ ₹5/– ಕೋಟಿ ಗಳನ್ನು ಸದರಿ ಖಾತೆಗೆ ಜಮೆ ಮಾಡಿ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿಯಲ್ಲಿ ಇಟ್ಟು ಅದರಿಂದ ಬರುವ ಬಡ್ಡಿ ಮೊತ್ತದಲ್ಲಿ ಪಿಂಚಣಿ ಮತ್ತು ಕುಟುಂಬ ಪಿಂಚಣಿಯನ್ನು ಮಂಡಳಿಯಲ್ಲಿ ಹಾಲಿ ನಿವೃತ್ತರಾಗಿರುವ ಮತ್ತು ಮುಂದೆ ನಿವೃತ್ತರಾಗಲಿರುವ ನೌಕರರಿಗೆ ನೀಡಲು ಶಾಶ್ವತವಾಗಿ ಹಣಕಾಸು ವ್ಯವಸ್ಥೆ ಮಾಡಿಕೊಳ್ಳಬೇಕಾಗಿರುವುದರಿಂದ ಸದರಿ ಅನ್‌ಕ್ಲೈಮ್ಡ್ ಮೊತ್ತವನ್ನು ಮಂಡಳಿಯ ಸಾಮಾನ್ಯ ಖಾತೆಯಿಂದ ಪಿಂಚಣಿ ಖಾತೆಗೆ ವರ್ಗಾಯಿಸಲು ಮಂಡಳಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

### ಚರ್ಚೆ ಮತ್ತು ನಿರ್ಣಯ

ಮಂಡಳಿಯ ನೌಕರರ ಪಿಂಚಣಿ ನಿಧಿಯ ಖಾತೆ ಸಂಖ್ಯೆ 30428018589 ಗೆ ₹5/– ಕೋಟಿಗಳನ್ನು ಪಿಂಚಣಿ ನಿಧಿಯ ಖಾತೆಗೆ ವರ್ಗಾಯಿಸಿ ನಿಶ್ಚಿತ ಠೇವಣಿ ಇರಿಸಿ ಇದರಿಂದ ಬರುವ ಬಡ್ಡಿ ಮೊತ್ತದಿಂದ ಹಾಲಿ ನಿವೃತ್ತರಾಗಿರುವ ಮತ್ತು ಮುಂದೆ ನಿವೃತ್ತರಾಗಲಿರುವ ನೌಕರರಿಗೆ ಪಿಂಚಣಿ ನಿಧಿಗೆ ಉಪಯೋಗಿಸಿಕೊಳ್ಳಲು ಮಂಡಳಿ ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.

**ಕಾರ್ಯಸೂಚಿ-13**

**ನಿಜಲಿಂಗಪ್ಪ ಸಿ. ಸಾಗರ, ಗ್ರೂಪ್-ಡಿ, ನೌಕರ ರವರು ದಿನಾಂಕ: 31-10-2015 ರಂದು ಮರಣ ಹೊಂದಿರುತ್ತಾರೆ. ಇವರ ಪತ್ನಿ ಶ್ರೀಮತಿ. ಆಶಾ ನಿಜಲಿಂಗಪ್ಪ ಸಾಗರ ಇವರ ಮಗನಾದ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಕೋರಿರುವ ಬಗ್ಗೆ.**

ನಿಜಲಿಂಗಪ್ಪ ಎಸ್ ಸಾಗರ, ಗ್ರೂಪ್-ಡಿ ನೌಕರ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ದಿನಾಂಕ : 05-09-1992 ರಂದು ಸೇವೆಗೆ ಸೇರಿದ್ದು, ಅನ್ಯ ಸೇವೆಯ ಮೇರೆಗೆ ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ-2, ವಿಜಯಪುರದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ದಿನಾಂಕ :31-10-2015 ರಂದು ಸೇವೆಯಲ್ಲಿ ಇರುವಾಗಲೇ ಮರಣ ಹೊಂದಿರುತ್ತಾರೆ. ಇವರ ಪತ್ನಿ ಶ್ರೀಮತಿ ಆಶಾ ನಿಜಲಿಂಗಪ್ಪ ಸಾಗರ ಇವರು ಮನವಿ ಸಲ್ಲಿಸಿ, ನನಗೆ 5 ಜನ ಮಕ್ಕಳಿದ್ದು ಇವರಲ್ಲಿ ದಿವಂಗತ ನಿಜಲಿಂಗಪ್ಪ ಎಸ್. ಸಾಗರ ರವರ ಮಗ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಕೋರಿರುತ್ತಾರೆ.

ಸದರಿ ವಿಚಾರದಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕೆಸಿಎಸ್ಆರ್ ನಿಯಮ ಅಳವಡಿಸಿಕೊಂಡಿರುವುದರಿಂದ ಸೇವೆಯಲ್ಲಿರುವಾಗಲೇ ಮರಣ ಹೊಂದಿದ್ದಲ್ಲಿ, ಅವರ ಕುಟುಂಬದ ಅವಲಂಬಿತರಲ್ಲಿ ಒಬ್ಬರಿಗೆ ಮರಣ ಹೊಂದಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಅನುಕಂಪದ ಆಧಾರದ ಮೇಲೆ ಹುದ್ದೆ ನೀಡಲಾಗುತ್ತಿದೆ. ನಿಗಧಿತ ಅವಧಿಯೊಳಗೆ ಇವರ ಪತ್ನಿ ಅರ್ಜಿ ಸಲ್ಲಿಸಿರುವುದರಿಂದ ದಿವಂಗತರು ನಿರ್ವಹಿಸುತ್ತಿದ್ದ ಗ್ರೂಪ್-ಡಿ ಹುದ್ದೆ ಖಾಲಿರುವುದರಿಂದ ಅದೇ ಹುದ್ದೆಯನ್ನು ಇವರ ಮಗನಿಗೆ ನೀಡಲು ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ನಿಜಲಿಂಗಪ್ಪ ಸಿ. ಸಾಗರ, ಗ್ರೂಪ್-ಡಿ, ನೌಕರ ರವರು ದಿನಾಂಕ: 31-10-2015 ರಂದು ಮರಣ ಹೊಂದಿರುತ್ತಾರೆ. ಇವರ ಪತ್ನಿ ಶ್ರೀಮತಿ. ಆಶಾ ನಿಜಲಿಂಗಪ್ಪ ಸಾಗರ ಇವರ ಮಗನಾದ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ಚರ್ಚಿಸುವಾಗ ಮಂಡಳಿಯ ಸದಸ್ಯರಾದ ಶ್ರೀ ನಾಗರಾಜು, ಎಐಟಿಯುಸಿ, ರವರು ಈ ಹಿಂದೆಯೆ ಕರ್ತವ್ಯದಲ್ಲಿದ್ದು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ಅವಲಂಬಿತರಿಗೆ ಅನುಕಂಪದ ಮೇಲೆ ಕೆಲಸವನ್ನು ನೀಡುವ ಬಗ್ಗೆ 82ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಆದ್ದರಿಂದ ಮೊದಲು ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ನೀಡಿ ನಂತರ ಮಂಡಳಿ ಸಭೆಗೆ ಘಟನೋತ್ತರ ಮಂಜೂರಾತಿಗೆ ಮಂಡಿಸಬಹುದಾಗಿದೆ ಎಂದು ವಿಷಯ ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನೊಳಗೊಂಡಂತೆ ಸದಸ್ಯರೆಲ್ಲರು ಒಪ್ಪಿಗೆ ಸೂಚಿಸಿದರು. ತದನಂತರ ಮೃತ ನಿಜಲಿಂಗಪ್ಪ ಎಸ್ ಸಾಗರ, ಗ್ರೂಪ್-ಡಿ ನೌಕರ ಇವರ ಪತ್ನಿ ಶ್ರೀಮತಿ ಆಶಾ ನಿಜಲಿಂಗಪ್ಪ ಸಾಗರ ಇವರ ಮಗನಾದ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸದಸ್ಯರೆಲ್ಲರೂ ಸರ್ವಾನುಮತದಿಂದ ನಿರ್ಣಯಿಸಿತು.

## ಕಾರ್ಯಸೂಚಿ-14

## ಮಂಡಳಿಯಲ್ಲಿ ಖಾಲಿಯಿರುವ ಮೇಲ್ವಿಚಾರಕರ/ಎ.ದ.ಸ ಹುದ್ದೆಗಳಿಗೆ ಗ್ರೂಪ್ 'ಡಿ' ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕೆಲಸ ನಿರ್ವಹಿಸುತ್ತಿರುವ 'ಡಿ' ದರ್ಜೆ ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ 83ನೇ ಮಂಡಳಿ ಸಭೆಯಲ್ಲಿ ವಿಷಯ ಪ್ರಸ್ತಾಪವಾಗಿ ಸಿ&ಆರ್ ಗೆ ತಿದ್ದುಪಡಿ ಮಾಡಿ ಮುಂಬಡ್ತಿ ನೀಡುವಂತೆ ನಿರ್ಣಯಿಸಲಾಗಿದೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 'ಡಿ' ದರ್ಜೆ ನೌಕರರು ಸತತವಾಗಿ 21-23 ವರ್ಷದಿಂದ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಸದರಿ ನೌಕರರಲ್ಲಿ ಕೆಲವರು ಪದವಿಯನ್ನು ಹಾಗೂ ಇಲಾಖಾ ಪರೀಕ್ಷೆಯನ್ನು ಪಾಸು ಮಾಡಿರುತ್ತಾರೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ತಾಲ್ಲೂಕು ಜಿಲ್ಲೆಗಳಲ್ಲಿ ಇದ್ದ ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಮುಚ್ಚಲಾಗಿದ್ದು, ಕೇಂದ್ರ ಕಛೇರಿ ಮಾತ್ರ ಇರುತ್ತದೆ. 1994 ರಲ್ಲಿ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇಮಕಾತಿ 75% ಮತ್ತು ಮುಂಬಡ್ತಿ 25% ರಷ್ಟುನ್ನು ನೀಡಲು ಅವಕಾಶವಿದೆ. ಆದರೆ ಈಗಾಗಲೇ ಕೇಂದ್ರಗಳನೆಲ್ಲಾ ಮುಚ್ಚಿರುವುದರಿಂದ ಮತ್ತು ಕರ್ನಾಟಕ ರಾಜ್ಯಾದ್ಯಂತ ಯೋಜನೆಗಳನ್ನು ರೂಪಿಸುವುದು ಹಾಗೂ ಕಾರ್ಮಿಕರಿಗೆ ಯೋಜನೆಗಳನ್ನು ತಲುಪಿಸುವ ಕಾರ್ಯಕ್ರಮ ಕೇಂದ್ರ ಕಛೇರಿ ಬೆಂಗಳೂರಿನಿಂದಲೇ ನಡೆಯುತ್ತಿರುವುದರಿಂದ ಈಗ ಕೇಂದ್ರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರು 2-5 ವರ್ಷಗಳಲ್ಲಿ ನಿವೃತ್ತಿ ಹೊಂದುವವರಿರುತ್ತಾರೆ. ಮುಂದಿನ ಮಂಡಳಿಯಲ್ಲಿ ಕೆಲಸದ ಅನುಭವ ಇಲ್ಲದೇ ಇರುವ ನೌಕರರಿಂದ ಕಾರ್ಮಿಕರಿಗೆ ಯೋಜನೆಗಳನ್ನು ರೂಪಿಸಿ ನೀಡುವುದು ಕಷ್ಟ/ಸಾಧ್ಯವಾಗುವುದರಿಂದ ಮಂಡಳಿಯಲ್ಲಿ ಈಗಾಗಲೇ ನಿವೃತ್ತಿ ಹೊಂದಿರುವ 13 ಎ.ದ.ಸ/ಮೇಲ್ವಿಚಾರಕರ ಹುದ್ದೆ ಖಾಲಿ ಇರುತ್ತದೆ. ಮಂಡಳಿಯಿಂದ ಕಾರ್ಮಿಕರ ಅನುಕೂಲಕ್ಕೆ ಶುಭ ಕಾರ್ಯಗಳಿಗೆ ವಿಜಯಪುರ, ಗದಗ, ಬೆಂಗಳೂರಿನ ಪೀಣ್ಯ, ಬಾಪೂಜಿನಗರ ಈ ಸ್ಥಳಗಳಲ್ಲಿ ಸಮುದಾಯ ಭವನವಿದ್ದು, ಬಾಗಲಗುಂಟೆಯಲ್ಲಿ ಮತ್ತೊಂದು ಸಮುದಾಯ ಭವನವನ್ನು ನಿರ್ಮಿಸಲಾಗುತ್ತಿದೆ. ಈ ಎಲ್ಲಾ ಸ್ಥಳಗಳಿಗೆ ಸಮುದಾಯ ಭವನದ ನಿರ್ವಹಣೆಗೆ 2ನೇ ದರ್ಜೆ ಸಹಾಯಕರ ಅವಶ್ಯಕತೆ ಇರುತ್ತದೆ. ಆದ್ದರಿಂದ ಮಂಡಳಿಯ ಆಡಳಿತಾತ್ಮಕ ದೃಷ್ಠಿಯಿಂದ ಹಾಗೂ ಅವರನ್ನು ಮಾನಸಿಕವಾಗಿ ಸದೃಢಗೊಳಿಸಲು ಮಂಡಳಿಯಲ್ಲಿ 'ಡಿ' ದರ್ಜೆ ನೌಕರರು ಸತತವಾಗಿ 21-23 ವರ್ಷದಿಂದ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಅರ್ಹ ಡಿ-ದರ್ಜೆ ನೌಕರರಿಗೆ ಮುಂಬಡ್ತಿ ನೀಡುವುದರಿಂದ ಮಂಡಳಿಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ. ಈಗಾಗಲೇ ಈ ನೌಕರರು ಸ್ವಯಂ ಚಾಲಿತ ವಿಶೇಷ ವೇತನ ಪಡೆದಿರುತ್ತಾರೆ. ಇವರಿಗೆ ಮುಂಬಡ್ತಿ ನೀಡುವುದರಿಂದ 1 ವಾರ್ಷಿಕ ವೇತನ ಮುಂಬಡ್ತಿಯನ್ನು ಮಾತ್ರ ನೀಡಬೇಕಾಗಿರುತ್ತದೆ. ಹಾಗೂ ಮುಂದೆ ಮಂಡಳಿಯ ಕೆಲಸಕ್ಕೆ ಹೊರ ಗುತ್ತಿಗೆಯಿಂದ ನೌಕರರನ್ನು ಪಡೆದು ವೇತನ ನೀಡುವುದನ್ನು ತಪ್ಪಿಸಿ ಮಂಡಳಿಗೆ ಆರ್ಥಿಕ ಹೊರೆಯಾಗುವುದನ್ನು ತಡೆಯಬಹುದು. ಸಿ&ಆರ್ ನ ತಿದ್ದುಪಡಿಯಾಗುವುದು ಬಹಳ ವಿಳಂಬವಾಗುವುದರಿಂದ ಮಂಡಳಿಯ ದೈನಂದಿನ ಕೆಲಸಕ್ಕೆ ಎರಡನೆ ದರ್ಜೆ ಸಹಾಯಕರ ಅವಶ್ಯಕತೆ ಬಹಳ ಇರುವುದರಿಂದ ಸದರಿ 'ಡಿ' ದರ್ಜೆ ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರದ ಕಾರ್ಮಿಕ ಸಚಿವಾಲಯದಿಂದ ಅಗತ್ಯವಾದ ಹುದ್ದೆಗಳಿಗೆ ಕಾರ್ಯಕಾರಿ ಆದೇಶ ಪಡೆದು ನೀಡುವ ಬಗ್ಗೆ ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

## ನಿರ್ಣಯ

ಮಂಡಳಿಯಲ್ಲಿ ಖಾಲಿಯಿರುವ ಮೇಲ್ವಿಚಾರಕರ/ಎ.ದ.ಸ ಹುದ್ದೆಗಳಿಗೆ ಗ್ರೂಪ್ 'ಡಿ' ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ ಕಲ್ಯಾಣ ಆಯುಕ್ತರು ವಿಷಯ ಪ್ರಸ್ತಾಪಿಸಿ, ಮಂಡಳಿ ವೃಂದ ಮತ್ತು ನೇಮಕಾತಿಯಲ್ಲಿ ಶೇ. 75% ರಷ್ಟು ನೇರ ನೇಮಕಾತಿ, ಶೇ.25% ರಷ್ಟು ಸೇವೆಯಲ್ಲಿ ಇರುವವರಿಗೆ ಅರ್ಹ ಸಿಬ್ಬಂದಿಗೆ ಭಡ್ತಿ ಹಾಗೂ ಪದೋನ್ನತ್ತಿ ನೀಡುವ ಪದ್ಧತಿ ಇರುತ್ತದೆಂದು ಈ ಕ್ರಮವನ್ನು ಅನುಸರಿಸಲಾಗುತ್ತಿದೆಯೆಂದು ಸಭೆಗೆ ತಿಳಿಸಿದರು. ಒಂದು ಡಾಟಾ ಎಂಟ್ರಿ ಅಪರೇಟರ್ ಅನ್ನು ನೇರ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಲೆಕ್ಕ ಪರಿಶೋಧಕರು ಆಕ್ಷೇಪಣೆ ಎತ್ತಿರುತ್ತಾರೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ, ಸಿ ಅಂಡ್ ಆರ್ ನಿಯಮಗಳನ್ನು ರೂಪಿಸಿ, ನೇಮಕಾತಿ ಮಾಡಿಕೊಂಡಲ್ಲಿ ಈ ರೀತಿಯ ಆಕ್ಷೇಪಣೆಗಳು ಬರುವುದಿಲ್ಲವೆಂದು ಸದಸ್ಯರು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ಅಧ್ಯಕ್ಷರು ಸಿ&ಆರ್ ಗೆ ತಿದ್ದುಪಡಿ ಮಾಡಲು ಮಂಡಳಿಯ ಮೂರು ಸದ್ಯಸರನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸಿ ವೃಂದ ಮತ್ತು ನೇಮಕಾತಿ ತಿದ್ದುಪಡಿಗೆ ಈ ಹುದ್ದೆಯನ್ನು ಸೇರಿಸಿ ಸರ್ಕಾರಕ್ಕೆ ಕಳುಹಿಸಲು ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಇದನ್ನು ಸಭೆಯಲ್ಲಿದ್ದ ಸದಸ್ಯರೆಲ್ಲರು ಸರ್ವಾನುಮತದಿಂದ ಅನುಮೋದಿಸಿದರು.

## ಕಾರ್ಯಸೂಚಿ–15

ಶ್ರೀ. ಎನ್. ಸಂಪತ್ ಕುಮಾರ್, ಪ್ರ.ದ.ಸ, ಅನ್ಯ ಕಾರ್ಯ ನಿಮಿತ್ತ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವಿಧಾನ ಸೌಧ ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿಧಾನ ಸಭೆಯ ಅಧಿವೇಶನ ನಡೆದ ಸಮಯದಲ್ಲಿ ಕಾರ್ಯನಿರ್ವಹಿಸಿದ್ದಕ್ಕೆ ದಿನ ಭತ್ಯೆಯನ್ನು 2013 ರಿಂದ 2015 ರವರೆಗೆ ಮಂಡಳಿಯಿಂದ ನೀಡಲು ಮಾನ್ಯ ಅಧ್ಯಕ್ಷರು ಈಗಾಗಲೇ ಮಂಜೂರು ಮಾಡಿರುವ ಹಾಗೂ ಆಡಿಟ್ ಆಕ್ಷೇಪಣೆ ಆಗಿರುವ ಬಗ್ಗೆ.

ಶ್ರೀ ಎನ್. ಸಂಪತ್ ಕುಮಾರ್, ಪ್ರ.ದ.ಸ, ಅನ್ಯ ಕಾರ್ಯ ನಿಮಿತ್ತ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವಿಧಾನ ಸೌಧ ಬೆಂಗಳೂರು ಇಲ್ಲಿ 2013 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ನೌಕರರು 2013, 2014 ಮತ್ತು 2015 ನೇ ಸಾಲಿನಲ್ಲಿ ವಿಧಾನ ಸಭೆಯ ಅಧಿವೇಶನ ನಡೆದಾಗ ಕಾರ್ಯ ನಿರ್ವಹಿಸಿದ್ದು, ಈ ಅವಧಿಗೆ ದಿನವೊಂದಕ್ಕೆ ₹1250 ಹಾಗೂ ₹750 ಗಳಂತೆ ವಿಧಾನ ಮಂಡಲದ ಕಾರ್ಯಾಲಯದ ಆದೇಶದಂತೆ (ಪ್ರತಿ ಲಗತ್ತಿಸಿದೆ) ಮಾನ್ಯ ಅಧ್ಯಕ್ಷರು ಮಂಜೂರಾತಿ ನೀಡಿ ಮುಂದಿನ ಮಂಡಳಿ ಸಭೆಯ ಮುಂದೆ ಘಟನೋತ್ತರ ಮಂಜೂರಾತಿಗಾಗಿ ಮಂಡಿಸಲು ಆದೇಶಿಸಿದ ಪ್ರಕಾರ ಸದರಿ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿ, ಸದರಿಯವರಿಗೆ ಪಾವತಿಸಿರುವ ಬಗ್ಗೆ ಆಡಿಟ್‌ನವರು ಆಕ್ಷೇಪಣೆ ಮಾಡಿ ₹31,500/– ಸದರಿ ನೌಕರರಿಂದ ವಸೂಲಾತಿಗೆ ಸೂಚಿಸಿರುತ್ತಾರೆಂಬ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

## ಚರ್ಚೆ ಮತ್ತು ನಿರ್ಣಯ

ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಯವರು ಸದರಿ ನೌಕರರು ಖಾಯಂ ನೌಕರರಾಗಿದ್ದು, ಗೌರವಧನ ಮಂಜೂರು ಮಾಡಬಹುದೆಂದು ಅಭಿಪ್ರಾಯ ಪಟ್ಟರು. ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

## ಕಾರ್ಯಸೂಚಿ–16

## ಮಂಡಳಿಗೆ ಹೊಸ ಲಾಂಚನ (ಲೋಗೊ) ಅಳವಡಿಸಿಕೊಳ್ಳುವ ಬಗ್ಗೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಅಸ್ತಿತ್ವಕ್ಕೆ ಬಂದಾಗಿನಿಂದಲು ಕರ್ನಾಟಕ ಸರ್ಕಾರದ ಲಾಂಚನದಡಿಯಲ್ಲಿ ಕಾರ್ಯನಿರ್ವಹಿಸಿಕೊಂಡು ಬಂದಿರುತ್ತದೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಪ್ರಸ್ತುತ ಬಳಕೆ ಮಾಡಲಿಚ್ಚಿಸಿರುವ ಲೋಗೊ ಕಾರ್ಮಿಕ ಕುಟುಂಬಗಳ ಸರ್ವತೋಮುಖ ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಪ್ರತಿಪಾದಿಸುತ್ತದೆ. ಈ ದೆಸೆಯಲ್ಲಿ ಈ ಲಾಂಛನವು ಕಾರ್ಮಿಕ ಕುಟುಂಬಗಳ ಶ್ರೇಯಸ್ಸು ಕಲ್ಯಾಣ ಮಂಡಳಿಯ ಅಭಯ ಹಸ್ತದಲ್ಲಿ ಸುರಕ್ಷಿತವಾಗಿರುವುದನ್ನು ಸಂಕೇತಿಸುತ್ತದೆ. (ಅನುಂಧ–1 ರಲ್ಲಿ ಲಗತ್ತಿಸಿದೆ)

ಆದ್ದರಿಂದ ಈಗ ಬಳಕೆಯಲ್ಲಿರುವ ಕರ್ನಾಟಕ ಸರ್ಕಾರದ ಲಾಂಛನದ ಜೊತೆಗೆ ಕಾರ್ಮಿಕ ಕಲ್ಯಾಣ ಮಂಡಳಿಯು ಅಸ್ತಿತ್ವಕ್ಕೆ ತರಲು ಉದ್ದೇಶಿಸಿರುವ 'ಲೋಗೊ'ವನ್ನು ಅಳವಡಿಸಿಕೊಂಡು ಬಳಕೆ ಮಾಡಲು ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಇವರ ಅನುಮೋದನೆಗಾಗಿ ದಿನಾಂಕ: 21–12–2015 ರಲ್ಲಿ ಸಲ್ಲಿಸಲಾಗಿದ್ದು, ಸದರಿ ವಿಷಯವನ್ನು ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

## ಚರ್ಚೆ ಮತ್ತು ನಿರ್ಣಯ

ಮಂಡಳಿಗೆ ಹೊಸ ಲಾಂಚನ (ಲೋಗೊ) ಅಳವಡಿಸಿಕೊಳ್ಳುವ ಬಗ್ಗೆ ಈಗ ಬಳಕೆಯಲ್ಲಿರುವ ಕರ್ನಾಟಕ ಸರ್ಕಾರದ ಲಾಂಛನದ ಜೊತೆಗೆ ಕಾರ್ಮಿಕ ಕಲ್ಯಾಣ ಮಂಡಳಿಯು ಅಸ್ತಿತ್ವಕ್ಕೆ ತರಲು ಉದ್ದೇಶಿಸಿರುವ 'ಲೋಗೊ'ವನ್ನು ಅಳವಡಿಸಿಕೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನೊಳಗೊಂಡಂತೆ ಎಲ್ಲ ಸದಸ್ಯರ ಸಹಮತಿಯೊಂದಿಗೆ ನಿರ್ಣಯಿಸಲಾಯಿತು.

## ಕಾರ್ಯಸೂಚಿ–17

## ಮಂಡಳಿಯ ಕಾರ್ಯಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವ ಬಗ್ಗೆ ಕಾರ್ಮಿಕ ಸಚಿವರು ಕಳುಹಿಸಿದ ಪ್ರಸ್ತಾವನೆ ಬಗ್ಗೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಯೋಜನೆಗಳ ಸೌಲಭ್ಯಗಳು ಕಾರ್ಮಿಕರು ಮತ್ತು ಅವಲಂಬಿತರು ಉಪಯೋಗ ಪಡೆದುಕೊಳ್ಳುವ ದೃಷ್ಠಿಯಿಂದ ಮಾಹಿತಿ ಪ್ರಚಾರ ಫಲಕ (Hoarding) ವನ್ನು ಅಳವಡಿಸಲಾಗಿದೆ.

ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಅಸ್ತಿತ್ವದಲ್ಲಿರುವ ಕಲ್ಯಾಣ ಯೋಜನೆಗಳ ವಿವರಗಳನ್ನು ಕಾರ್ಮಿಕರು ಮತ್ತು ಅವರ ಅವಲಂಬಿತರಲ್ಲಿ ಅರಿವು ಮೂಡಿಸುವ ಸಂಬಂಧ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 20x10 ಅಡಿ ಅಳತೆಯ ಮಾಹಿತಿ ಪ್ರಚಾರ ಫಲಕ (Hoarding) ವನ್ನು ಮಾರ್ಕೆಂಟಿಂಗ್ ಕನ್ಸಲ್ಟೆಂಟ್ಸ್ & ಏಜೆನ್ಸೀಸ್ ಲಿ., ಬೆಂಗಳೂರು ಇವರಿಂದ ಅಳವಡಿಸಲಾಗಿರುತ್ತದೆ. ಆದರೆ ಯಾದಗಿರಿ, ರಾಯಚೂರು, ಬಳ್ಳಾರಿ, ಬೀದರ್, ಮಡಿಕೇರಿ, ಚಾಮರಾಜನಗರ, ಕೊಪ್ಪಳ, ಕೋಲಾರ ಕಲ್ಯಾಣ ಯೋಜನೆಗಳ ಸೌಲಭ್ಯಗಳನ್ನು ಈ ಜಿಲ್ಲೆಗಳ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಯೋಗ ಪಡೆಯುತ್ತಿರುವುದಿಲ್ಲ. ಆದ್ದರಿಂದ ಇಂತಹ ಜಿಲ್ಲೆಗಳನ್ನು ವಿಶೇಷವಾಗಿ ಪರಿಗಣಿಸಿ ಕಲ್ಯಾಣ ಯೋಜನೆಗಳ ವಿವರಗಳನ್ನು ಕಾರ್ಮಿಕರಿಗೆ ತಿಳಿಯಪಡಿಸಿ ಪ್ರಚಾರಕೋಸ್ಕರ ಜಿಲ್ಲೆಗಳ ಪ್ರಮುಖ ಕೇಂದ್ರಗಳಲ್ಲಿ ಗೋಡೆ ಬರಹ, ಪಲಕ, ಬ್ಯಾನರ್ಸ್ ಹಾಕುವ ಮೂಲಕ ಅರಿವು ಮೂಡಿಸುವ ಬಗ್ಗೆ ₹1.5/– ಕೋಟಿಯಿಂದ ₹2/– ಕೋಟಿವರೆಗೆ ತಗಲಬಹುದಾದ ಅಂದಾಜು ವೆಚ್ಚವನ್ನು ಭರಿಸುವ ಬಗ್ಗೆ ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

### ಚರ್ಚೆ ಮತ್ತು ನಿರ್ಣಯ

ಶ್ರೀ ಮಹಂತೇಶ್, ರಾಜ್ಯ ಕಾರ್ಯದರ್ಶಿ, ಸಿ.ಐ.ಟಿ.ಯು ಇವರು ಮಾತನಾಡಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಯೋಜನೆಗಳ ಸೌಲಭ್ಯಗಳನ್ನು ಕಾರ್ಮಿಕರು ಮತ್ತು ಅವರ ಅವಲಂಬಿತರು ಉಪಯೋಗ ಪಡೆದುಕೊಳ್ಳುವ ದೃಷ್ಠಿಯಿಂದ ಪ್ರಚಾರವನ್ನು ಎನ್.ಜಿ.ಓ, ಕಾರ್ಮಿಕ ಸಂಘ, ಕಾಸಿಯದ ಪ್ರತಿನಿಧಿಗಳ ಸಹಯೋಗದೊಂದಿಗೆ ಮಾಡಿದಲ್ಲಿ ಅತ್ಯಂತ ಪರಿಣಾಮಕಾರಿಯಾಗುತ್ತದೆಂದು ಹಾಗೂ ಮಂಡಳಿಯ ಸದಸ್ಯರುಗಳ ಸಹಕಾರವನ್ನು ಸಹ ಪಡೆದುಕೊಳ್ಳಬೇಕೆಂದು ಕೋರಿದಾಗ, ಅಧ್ಯಕ್ಷರು ಒಪ್ಪಿಗೆ ಸೂಚಿಸಿ, ಸೂಕ್ತ ಗೋಡೆ ಬರಹ/ಟಿನ್ ಬೋರ್ಡ್ 20x10 ಅಡಿ ಅಳತೆಯ ಮಾಹಿತಿ ಪ್ರಚಾರ ಫಲಕ(Hoarding) ವನ್ನು ಅಳವಡಿಸುವುದಕ್ಕೆ₹ 1.5/– ಕೋಟಿಯಿಂದ ₹2/– ಕೋಟಿ ವರೆಗೆ ತಗಲಬಹುದಾದ ಅಂದಾಜು ವೆಚ್ಚವನ್ನು ಭರಿಸುವ ಬಗ್ಗೆ ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಇದನ್ನು ಮಂಡಳಿಯ ಸದಸ್ಯರೆಲ್ಲ ಸರ್ವಾನುಮತದಿಂದ ಅನುಮೋದಿಸಿದರು.

**ಕಾರ್ಯಸೂಚಿ–18**

**ಹಿರಿಯೂರು ತಾಲ್ಲೂಕು ವಾಣಿವಿಲಾಸಪುರದಲ್ಲಿರುವ ಕಾರ್ಮಿಕ ಕಲ್ಯಾಣ ಮಂಡಳಿಯ 3 ಎಕರೆ 30 ಗುಂಟೆ ಜಮೀನಿನಲ್ಲಿ ತಂತಿ ಬೇಲಿ ಹಾಕಲು ಠೇವಣಿ ನೀಡಿದ್ದು ಪೂರ್ಣಗೊಳಿಸಿರುವ ಬಗ್ಗೆ.**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸೇರಿದ ಹಿರಿಯೂರು ತಾಲ್ಲೂಕು ವಾಣಿವಿಲಾಸಪುರ ದಲ್ಲಿರುವ 3 ಎಕರೆ 30 ಗುಂಟೆ ಜಮೀನಿನ ಅರ್ಧ ಭಾಗ ಎಲ್ ಆಕಾರದಲ್ಲಿ ತಂತಿ ಬೇಲಿಯನ್ನು ಹಾಕಲು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ರವರಿಗೆ ₹3/– ಲಕ್ಷ ಠೇವಣಿಯನ್ನು ಇಡಲಾಗಿದೆ. ಹಾಗೂ ಸದರಿ ಇಲಾಖೆಯವರು ತಂತಿ ಬೇಲಿ ಹಾಕುವ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ. ಮತ್ತು ಹಣ ಬಳಕೆ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಈ ವಿಷಯವನ್ನು ಮಂಡಳಿಯ ಅವಗಾಹನೆಗೆ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಹಿರಿಯೂರು ತಾಲ್ಲೂಕು ವಾಣಿವಿಲಾಸಪುರದಲ್ಲಿರುವ ಕಾರ್ಮಿಕ ಕಲ್ಯಾಣ ಮಂಡಳಿಯ 3 ಎಕರೆ 30 ಗುಂಟೆ ಜಮೀನಿನಲ್ಲಿ ತಂತಿ ಬೇಲಿ ಹಾಕಲು ಠೇವಣಿ ನೀಡಿದ್ದ ಕಾಮಗಾರಿಯನ್ನು ಪೂರ್ಣಗೊಳಿಸಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ ಚಿತ್ರದುರ್ಗ ರವರು ಹಣ ಬಳಕೆ ಪ್ರಮಾಣ ಪತ್ರವನ್ನು ಕಳುಹಿಸಿರುವುದನ್ನು ಸಭೆಯು ಅವಗಾಹನಿಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ–19**

**ಬಾಗಲಗುಂಟೆ 7 ಎಕರೆ 20 ಗುಂಟೆ ಜಮೀನಿನಲ್ಲಿ ಶುದ್ಧ ನೀರಿನ ಘಟಕ ಸ್ಥಾಪಿಸಲು ಸ್ಥಳವಕಾಶ ನೀಡಲು ಕೋರಿರುವ ಬಗ್ಗೆ.**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸೇರಿದ ಬಾಗಲಗುಂಟೆ ವ್ಯಾಪ್ತಿಯ ಮಂಜುನಾಥ ನಗರದಲ್ಲಿರುವ 7 ಎಕರೆ 20 ಗುಂಟೆ ಜಮೀನಿನಲ್ಲಿ ಶುದ್ಧ ನೀರಿನ ಘಟಕವನ್ನು ಸ್ಥಾಪಿಸಲು ಸ್ಥಳಾವಕಾಶ ನೀಡಬೇಕೆಂದು ದಿನಾಂಕ : 08–01–2016 ರಂದು ಮಂಜುನಾಥ ನಗರದ ಸ್ಥಳೀಯ ಗ್ರಾಮಸ್ಥರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.14 ರ ಸದ್ಯಸರು ವಾರ್ಡ್ ನಂ. 14, ಮಂಜುನಾಥ ನಗರದಲ್ಲಿ ಮಧ್ಯಮ ವರ್ಗ ಮತ್ತು ಕೆಳ ವರ್ಗದ ಜನರು ಹೆಚ್ಚಾಗಿ ವಾಸ ಮಾಡುತ್ತಿದ್ದು, ಕುಡಿಯುವ ನೀರಿನ ಸಮಸ್ಯೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ. ಸದರಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಇಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಶುದ್ಧ ನೀರಿನ ಘಟಕವನ್ನು ಸ್ಥಾಪಿಸುವುದು ಅವಶ್ಯಕವಾಗಿರುತ್ತದೆ ಎಂದು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಸ್ವತ್ತಿನಲ್ಲಿ ಶುದ್ಧ ನೀರಿನ ಘಟಕವನ್ನು ಸ್ಥಾಪಿಸಲು 30x40 (1200 ಚ.ಅ) ಸ್ಥಳಾವಕಾಶ ನೀಡುವಂತೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ಮಂಡಳಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಬಾಗಲಗುಂಟೆ 7 ಎಕರೆ 20 ಗುಂಟೆ ಜಮೀನಿನಲ್ಲಿ ಶುದ್ಧ ನೀರಿನ ಘಟಕ ಸ್ಥಾಪಿಸಲು ಸ್ಥಳವಕಾಶ ನೀಡಲು ಕೋರಿರುವ ಬಗ್ಗೆ ಕಲ್ಯಾಣ ಆಯುಕ್ತರು ವಿಷಯ ಪ್ರಸ್ತಾಪಿಸಿ ಸ್ಥಳೀಯ ಗ್ರಾಮಸ್ಥರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.14 ರ ಸದ್ಯಸರು ಸಾರ್ವಜನಿಕ ಆರೋಗ್ಯದ ಹಿತದೃಷ್ಠಿಯಿಂದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಶುದ್ಧ ನೀರಿನ ಘಟಕವನ್ನು ಸ್ಥಾಪಿಸಲು 30x40 (1200 ಚ.ಅ) ಸ್ಥಳಾವಕಾಶವನ್ನು ನೀಡುವಂತೆ ಕೋರಿರುತ್ತಾರೆ. ಈ ಹಿಂದೆ ದೇವಸ್ಥಾನಕ್ಕೆ ಸ್ಥಳವನ್ನು ನೀಡಲಾಗಿದ್ದು, ಅದರ ಪಕ್ಕಕ್ಕೆ 20x30 (600 ಚ.ಅ) ಜಾಗವನ್ನು ನೀಡುವ ಬಗ್ಗೆ ಸಭೆಯಲ್ಲಿ ಮಂಡಿಸಿದಾಗ ಮಾನ್ಯ ಅಧ್ಯಕ್ಷರು ಕುಡಿಯುವ ನೀರನ್ನು ನೀಡುವುದು ಒಂದು ಉತ್ತಮ ಕೆಲಸವಾಗಿದ್ದು, 600 ಚ.ಅ ಜಾಗವನ್ನು ನೀಡಬಹುದೆಂದು ತಿಳಿಸಿದರು. ಈ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲಾ ಮಾನ್ಯ ಅಧ್ಯಕ್ಷರ ಸೂಚನೆಯನ್ನು ಒಪ್ಪಿ ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ–20**

**ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ನವೀದಾ ಶಬ್ನಂ ಇವರ ಖಾಯಂಗೆ ಸಂಬಂಧಿಸಿದಂತೆ ಸರ್ಕಾರದಿಂದ ಪತ್ರ ಬಂದಿರುವ ಬಗ್ಗೆ.**

83ನೇ ಸಭೆಯ ನಿರ್ಣಯದಲ್ಲಿ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಮಂಡಳಿ ಅಧ್ಯಕ್ಷರು ಸರ್ಕಾರದಿಂದ ಮಾಹಿತಿ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳೋಣ ಎಂದು ಅಲ್ಲಿಯವರೆಗೆ ಯಥಾ ಪ್ರಕಾರ ಡೇಟಾ ಎಂಟ್ರಿ ಆಪರೇಟರ್‌ರನ್ನು ಮುಂದುವರೆಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ದಿನಾಂಕ: 18–3–2015 ರಂದು ನಡೆದ 83ನೇ ಮಂಡಳಿಯ ತೀರ್ಮಾನದಂತೆ, ಸರ್ಕಾರಕ್ಕೆ ಈ ಕಛೇರಿ ಪತ್ರ ಸಂಖ್ಯೆ: ಕಾಕನಿ/ಆಡಳಿತ–1/ಸಿಆರ್–8/2015–16 ದಿನಾಂಕ: 29–6–2015ರಂದು ಪತ್ರ ಬರೆಯಲಾಗಿತ್ತು. ಇದಕ್ಕೆ ಉತ್ತರವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಕಾಇ 315 ಎಲ್ಇಟಿ 2015 ದಿನಾಂಕ: 11–9–2015ರ ಪತ್ರ ಬಂದಿರುತ್ತದೆ. ಸದರಿ ಪತ್ರವನ್ನು ಮಂಡಳಿಯ ಅವಗಾಹನೆಗೆ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ನವೀದಾ ಶಬ್ನಂ ಇವರ ಖಾಯಂಗೆ ಸಂಬಂಧಿಸಿದಂತೆ ಸರ್ಕಾರದಿಂದ ಪತ್ರ ಬಂದಿರುವ ಬಗ್ಗೆ ಕಲ್ಯಾಣ ಆಯುಕ್ತರು ವಿಷಯ ಪ್ರಸ್ತಾಪಿಸಿದಾಗ ಮಾನ್ಯ ಅಧ್ಯಕ್ಷರು ಸರ್ಕಾರದಿಂದ ಯಾವ ಪತ್ರ ಬಂದಿದೆ ಎಂದು ಕೇಳಿದರು. ಈ ಸಂದರ್ಭದಲ್ಲಿ ಕಲ್ಯಾಣ ಆಯುಕ್ತರು ಪತ್ರವನ್ನು ಸಭೆಯಲ್ಲಿ ಓದಿದರು. ಹೊರ ಗುತ್ತಿಗೆ ಆಧಾರದ ನೇಮಕಾತಿಯು ಕ್ರಮಬದ್ಧವಾದ ನೇಮಕಾತಿಯಾಗಿರುವುದಿಲ್ಲ ಮತ್ತು ಇದು ತಾತ್ಕಾಲಿಕವಾಗಿದ್ದು, ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ನಿಗಧಿಪಡಿಸಿದ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆಂದು ಸರ್ಕಾರದಿಂದ ಪತ್ರ ಬಂದಿರುವ ವಿಷಯವನ್ನು ಸಭೆಯ ಗಮನಕ್ಕೆ ತಿಳಿಸಿದಾಗ, ಸಿ&ಆರ್ ನಿಯಮವಳಿಗೆ ತಿದ್ದುಪಡಿ ತರಲು ಸರ್ಕಾರಕ್ಕೆ ಕಳುಹಿಸುವಾಗ ಈ ಹುದ್ದೆಯನ್ನು ಸೇರಿಸಿ ತಿದ್ದುಪಡಿ ಮಾಡಿಸುವ ಬಗ್ಗೆ ಕ್ರಮವಹಿಸಬೇಕೆಂದು ಅಧ್ಯಕ್ಷರು ತಿಳಿಸಿದಾಗ ಸದಸ್ಯರೆಲ್ಲರೂ ಸಹಮತ ವ್ಯಕ್ತಪಡಿಸಿದರು. ಅದರಂತೆ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಶ್ರೀ ಸಿ. ಕಾಂತರಾಜು, ಡಿ ದರ್ಜೆ ನೌಕರ ಇವರು 23 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುತ್ತಾರೆ. ಸದರಿ ನೌಕರರು ಸರ್ಕಾರದ ಅಧಿಕೃತ ಸಂಸ್ಥೆಯಾದ ಕಿಯೋನಿಕ್ಸ್ ನಲ್ಲಿ ಕಂಪ್ಯೂಟರ್ ತರಬೇತಿಯನ್ನು ಹೊಂದಿ ಕಿಯೋನಿಕ್ಸ್‌ನಿಂದ ಪ್ರಮಾಣಪತ್ರವನ್ನು ಪಡೆದಿರುತ್ತಾರೆ. ಸದರಿ ನೌಕರರು ದಿನಾಂಕ:13-11-2012 ರಿಂದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಗಣಕಯಂತ್ರದಲ್ಲಿ ಕಾರ್ಮಿಕರ ಅವಲಂಬಿತರ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ನಿರೀಕ್ಷಿತ ಅವಧಿಯಲ್ಲಿ ತಲುಪಿಸಲು ಹಾಗೂ ಕಾಲಕಾಲಕ್ಕೆ ವಿಷಯ ನಿರ್ವಾಹಕರು ನೀಡುವ ಪತ್ರಗಳನ್ನು ಗಣಕಯಂತ್ರದಲ್ಲಿ ನಮೂದಿಸುವ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ನೌಕರರನ್ನು ಪ್ರೋತ್ಸಾಹ ನೀಡುವ ಸಂಬಂಧ ಹಾಗೂ ಉತ್ಸಾಹದಿಂದ ಕೆಲಸ ಮಾಡುತ್ತಿದ್ದು, ಅವರಿಗೆ ಗೌರವ ಸಂಭಾವನೆ ₹.1,000/-ಗಳನ್ನು ಸದರಿ ನೌಕರರು ಎಲ್ಲಿಯವರೆಗೆ ಗಣಕಯಂತ್ರದಲ್ಲಿ ಕಾರ್ಯನಿರ್ವಹಿಸುತ್ತಾರೋ ಅಲ್ಲಿಯವರೆಗೆ ನೀಡುವ ಬಗ್ಗೆ ಮಂಡಳಿಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಕಲ್ಯಾಣ ಆಯುಕ್ತರು ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಕಲ್ಯಾಣ ಆಯುಕ್ತರು, ಗಣಕ ಯಂತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಡಿ-ದರ್ಜೆ ನೌಕರರಾದ ಶ್ರೀ ಕಾಂತರಾಜು ರವರಿಗೆ ₹ 1000/- ಗಳನ್ನು ಗೌರವ ಸಂಭಾವನೆ ನೀಡುವ ಬಗ್ಗೆ ವಿಷಯ ಪ್ರಸ್ತಾಪಿಸಿದಾಗ ಶ್ರೀ ಮಹಂತೇಶ್, ರಾಜ್ಯ ಕಾರ್ಯದರ್ಶಿ, ಸಿಐಟಿಯು ಇವರು ಮಾತನಾಡಿ ₹ 1000/- ಗಳ ಬದಲಾಗಿ ಇನ್ನು ಹೆಚ್ಚಿನ ಗೌರವ ಸಂಭಾವನೆ ನೀಡುವುದು ಸೂಕ್ತ ಎಂದು ಸಲಹೆ ನೀಡಿದರು. ಶ್ರೀ ನಾಗರಾಜು, ಎಐಟಿಯುಸಿ ರವರು ಮಾತನಾಡಿ ಸದರಿ ನೌಕರರು ನುರಿತ ನೌಕರರೆಂದು ಪರಿಗಣಿಸಿ ಇನ್ಸೆಂಟಿವ್ ನೀಡುವ ಬಗ್ಗೆ ಯಾವುದೇ ಅಭ್ಯಂತರವಿಲ್ಲವೆಂದು ತಿಳಿಸಿದರು. ಇದಕ್ಕೆ ಉಳಿದ ಸದಸ್ಯರುಗಳು ಮತ್ತು ಅಧ್ಯಕ್ಷರು ಸಹಮತಿ ಸೂಚಿಸಿ ₹1000/- ಗಳನ್ನು ಸದರಿ ನೌಕರರಿಗೆ ನೀಡುವ ಬಗ್ಗೆ ಸರ್ವಾನುಮತದಿಂದ ಅನುಮೋದಿಸಿತು.

2. ಹೊರ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಳೆದ ಮೂರು ವರ್ಷಗಳಿಂದು, ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಸುನಂದ ಇವರು ಮನವಿ ಪತ್ರ ನೀಡಿ ಪ್ರಸ್ತುತ ನನಗೆ ಕನಿಷ್ಠ ವೇತನವನ್ನು ಏಜೆನ್ಸಿರವರು ನೀಡುತ್ತಿದ್ದು, ಬೆಂಗಳೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ಇಬ್ಬರು ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮತ್ತು ಸಂಸಾರದ ಹೊಣೆ ನನ್ನದಾಗಿರುತ್ತದೆಂದು, ಆದ್ದರಿಂದ ಕಾರ್ಮಿಕ ಇಲಾಖೆಗೆ ಒಳಪಡುವ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಒಟ್ಟು ವೇತನ ₹15,387/- ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ₹15,701/-ಗಳನ್ನು ಮಾಸಿಕ ವೇತನವನ್ನಾಗಿ ಕೊಡಲಾಗುತ್ತಿದೆ, ಆದ್ದರಿಂದ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ನನಗೂ ಸಹ ಮೇಲಿನಂತೆ ವೇತನ ಹೆಚ್ಚಿಸಬೇಕೆಂದು ಕೋರಿರುವ ವಿಷಯವನ್ನು ಕಲ್ಯಾಣ ಆಯುಕ್ತರು ಸಭೆಯ ಗಮನಕ್ಕೆ ಮತ್ತು ಅನುಮೋದನೆಗಾಗಿ ಮಂಡಿಸಿದರು.

**ಚರ್ಚೆ ಮತ್ತು ನಿರ್ಣಯ**

ಹೊರ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಳೆದ ಮೂರು ವರ್ಷಗಳಿಂದು, ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಸುನಂದ ರವರು ನೀಡಿರುವ ಮನವಿ ಪತ್ರದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಈ ಬಗ್ಗೆ ಚರ್ಚಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಹೊರ ಗುತ್ತಿಗೆ ನೌಕರರಿಗೆ ನೀಡುತ್ತಿರುವ ₹ 15,701/- ಮಾಸಿಕ ವೇತನವನ್ನು ಈ ಮಂಡಳಿಯು ನೇಮಿಸಿಕೊಂಡಿರುವ ಏಜೆನ್ಸಿ ಮೂಲಕ ಮಾಸಿಕ ವೇತನವನ್ನು ನೀಡುವಂತೆ ಮಂಡಳಿಯ ಅಧ್ಯಕ್ಷರನೊಳಗೊಂಡಂತೆ ಒಪ್ಪಿ ಅನುಮೋದಿಸಲಾಯಿತು.

3. ಮಾನ್ಯ ಅಧ್ಯಕ್ಷರವರು ಮಂಡಳಿಯ ಸದ್ಯಸರಿಗೆ ಸಿಟ್ಟಿಂಗ್ ಫೀ ಎಷ್ಟು ನೀಡುತ್ತಿರುವುದಾಗಿ ಸಭೆಯಲ್ಲಿ ಕಲ್ಯಾಣ ಆಯುಕ್ತರನ್ನು ಕೇಳಿದಾಗ ಪ್ರತಿ ಸದಸ್ಯರಿಗೆ ₹1200/- ಗಳನ್ನು ನೀಡುತ್ತಿರುವುದಾಗಿ ತಿಳಿಸಿದ್ದಾಗ ಸದಸ್ಯರೆಲ್ಲ ಇದು ಬಹಳ ಕಡಿಮೆಯಾಗಿದ್ದು, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸಿಟ್ಟಿಂಗ್ ಫೀಯನ್ನು ಜಾಸ್ತಿ ನೀಡುತ್ತಿದ್ದು, ಅದರಂತೆ ನೀಡುವಂತೆ ಕೋರಿದೆ. ಇದಕ್ಕೆ ಮಾನ್ಯ ಅಧ್ಯಕ್ಷರ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೀಡುತ್ತಿರುವ ಸಿಟ್ಟಿಂಗ್ ಫೀಸ್ ಯನ್ನೆ ಈ ಮಂಡಳಿಯ ಸದಸ್ಯರಿಗೂ ಈ ಸಭೆಯಿಂದಲೆ ನೀಡುವಂತೆ ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಇದನ್ನು ಸಭೆಯಲ್ಲಿದ್ದ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು, ಶ್ರೀ ಶಾಂತಕುಮಾರ್, ಇಂಟಕ್ ಇವರು ಮಾತನಾಡಿ, ಶ್ರೀ ಯಶವಂತ್‌ಗೆ ಪದೋನ್ನತಿ ನೀಡಬೇಕು ಕೋರಿದರು. ಆಗ ಕಲ್ಯಾಣ ಆಯುಕ್ತರು ಮಾತನಾಡಿ ಈ ಬಗ್ಗೆ ಕೋರಿಕೆ ಬಂದಿರುವುದಾಗಿ ತಿಳಿಸಿ, ಆದರೆ ಸದರಿಯವರು ಜೇಷ್ಠತಾ ಪಟ್ಟಿ ಪ್ರಕಾರ 3ನೇಯವರು ಆಗಿರುವುದರಿಂದ ಮಂಡಳಿಯ ನಿಯಮಾವಳಿ ಪ್ರಕಾರ ಪದೋನ್ನತಿ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಸಿ&ಆರ್ ನಿಯಮಾವಳಿಗಳನ್ನು ರಚಿಸಿದ ನಂತರ ಪದೋನ್ನತಿ ನೀಡೋಣವೆಂದು ಹೇಳಿದರು. ಸದಸ್ಯರಾದ ಶ್ರೀ ನಾಗರಾಜ್, ಎಐಟಿಯುಸಿ ರವರು ಈ ಬಗ್ಗೆ ಸಮಿತಿ ರಚಿಸಲು ಕೋರಿದಾಗ, ಅಧ್ಯಕ್ಷರು ಅನುಮೋದಿಸಿದರು.

ಶ್ರೀ ನಾಗರಾಜ್, ಎಐಟಿಯುಸಿ ಇವರು ಮಾತನಾಡಿ, ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನಸಹಾಯ ₹ 5,000/– ಇದ್ದು, ಇದನ್ನು ಪಡೆಯಲು ಬೇರೆ ಬೇರೆ ಕಡೆ ಈ ಬಗ್ಗೆ ಧನಸಹಾಯವನ್ನು ಪಡೆದಿರಬಾರದು ಎಂಬ ಷರತ್ತು ಇತ್ತು, ಆದಾಗ್ಯೂ ಅಧ್ಯಕ್ಷರಾದ ತಾವು ಮಂಡಳಿಯಿಂದ ₹5,000/–ಗಳನ್ನು ಮಂಜೂರು ಮಾಡಲು ಅನುಮೋದಿಸಿರುವುದು ತುಂಬಾ ಸಂತೋಷದ ವಿಷಯವಾಗಿರುತ್ತದೆಂದು ತಿಳಿಸಿ ಧನ್ಯವಾದಗಳನ್ನು ತಿಳಿಸಿದರು.

ಶ್ರೀ ಶಾಂತಕುಮಾರ್, ಇಂಟಕ್ ಇವರು ಮಾತನಾಡಿ ಮಂಡಳಿಗೆ ಹೊಸದಾಗಿ ಸಿ&ಆರ್ ನಿಯಮಾವಳಿಗಳನ್ನು ರೂಪಿಸಿ ಅನುಮೋದನೆ ಪಡೆದು ಹೊಸ ನೇಮಕಾತಿಯನ್ನು ಮಾಡಬೇಕೆಂದು ಕೋರಿದರು ಮತ್ತು ಮಂಡಳಿಯ ಸಭೆಗಳಲ್ಲಿ ತೀರ್ಮಾನ ಮಾಡುವ ವಿಷಯಗಳಲ್ಲಿ ತುಂಬಾ ಸಹಕಾರ ನೀಡಿದಿರಿ ಎಂದು ಅಧ್ಯಕ್ಷರಿಗೆ ಧನ್ಯವಾದ ತಿಳಿಸಿದರು.

ಶ್ರೀ ಮಹಂತೇಶ್, ರಾಜ್ಯ ಕಾರ್ಯದರ್ಶಿ, ಸಿ.ಐ.ಟಿ.ಯು ಇವರು ಮಾತನಾಡಿ, ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಪರಿಷ್ಕರಿಸಿರುವುದರಿಂದ ಕಾರ್ಮಿಕರಿಗೆ ಹೆಚ್ಚಿನ ಪ್ರಯೋಜನವಾಗಿದೆ ಎಂದು, ನಿರ್ಲಕ್ಷ್ಯಕ್ಕೊಳಗಾದ ಕಾರ್ಮಿಕ ವಲಯಕ್ಕೆ ಸೂಕ್ತವಾಗಿ ಸ್ಪಂದನೆ ಮಾಡಿರುತ್ತಾರೆಂದು ಮತ್ತು ಮುಂದೆಯೂ ಸಹ ಮಾಡುತ್ತಾರೆಂದು ಆಶಿಸುತ್ತೇವೆಂದು ಅಧ್ಯಕ್ಷರಿಗೆ ಧನ್ಯವಾದ ತಿಳಿಸಿದರು.

ಅಧ್ಯಕ್ಷರು ಮಾತನಾಡಿ, ಮಂಡಳಿಯ ಅವಧಿಯು ದಿನಾಂಕ:13–03–2016ಕ್ಕೆ ಅಂತ್ಯವಾಗುತ್ತಿದ್ದು, ಕಳೆದ 2 1/2 ವರ್ಷಗಳಿಂದ ಮಂಡಳಿಯ ಸದಸ್ಯರಾಗಿ ತಾವೆಲ್ಲರೂ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಕಾರ್ಮಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಹಾಗೂ ಧನಸಹಾಯದ ಮೊತ್ತವನ್ನು ಪರಿಷ್ಕರಿಸಲು ತುಂಬಾ ಸಹಕಾರ ನೀಡಿರುತ್ತೀರೆಂದು, ಆದಕಾರಣ ಈ ಬಗ್ಗೆ ಸಮಯಾವಕಾಶವಿಲ್ಲದೇ ಇರುವುದರಿಂದ, ಮುಂದಿನ ದಿನದಲ್ಲಿ ಕಾರ್ಮಿಕ ಸಂಘದ ಹಿರಿಯ ಪ್ರತಿನಿಧಿಗಳು, ಕಾಸಿಯ ಪ್ರತಿನಿಧಿಗಳು, ಸರ್ಕಾರದಿಂದ ನಾಮನಿರ್ದೇಶನ ಹೊಂದಿರುವ ಎಲ್ಲ ಸದಸ್ಯರುಗಳನ್ನೊಳಗೊಂಡಂತೆ ಅನೌಪಚಾರಿಕ ಸಭೆಯನ್ನು ಕರೆದು ಎಲ್ಲರನ್ನು ಗೌರವಿಸುವ ಸಲುವಾಗಿ ವ್ಯವಸ್ಥೆ ಮಾಡಲು ಕಲ್ಯಾಣ ಆಯುಕ್ತರಿಗೆ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕಲ್ಯಾಣ ಆಯುಕ್ತರು.
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ
ಯಶವಂತಪುರ, ಬೆಂಗಳುರು.

ಸಹಿ/–
ಮಾನ್ಯ ಕಾರ್ಮಿಕ ರಾಜ್ಯ ಸಚಿವರು
ಹಾಗೂ ಅಧ್ಯಕ್ಷರು,
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,
ವಿಧಾನಸೌಧ, ಬೆಂಗಳೂರು.

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ದಿನಾಂಕ:09–03–2016 ರಂದು ಬುಧವಾರ ಮಧ್ಯಾಹ್ನ 12–00 ಘಂಟೆಗೆ ಸ್ಥಳ ಕ್ಯಾಪಿಟಲ್ ಹೋಟೆಲ್, ರಾಜಭವನದ ಹತ್ತಿರ, ಬೆಂಗಳೂರು ಇಲ್ಲಿ ಮಂಡಳಿಯ 85 ನೇ (12 ನೇ ಮಂಡಳಿಯ 5 ನೇ) ತುರ್ತು ಸಭೆಯ ನಡವಳಿಗಳು :**

| | |
|---|---|
| **<u>ಅಧ್ಯಕ್ಷತೆ</u>** | ಶ್ರೀ ಪಿ.ಟಿ ಪರಮೇಶ್ವರ ನಾಯ್ಕ,<br>ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು,<br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,<br>ಬೆಂಗಳೂರು. |
| **<u>ಹಾಜರಿದ್ದ ಸದಸ್ಯರು</u>** | **1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಕಾರ್ಮಿಕ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು–1.**<br><br>2) **ಕಾರ್ಮಿಕ ಆಯುಕ್ತರು,**<br>ಕಾರ್ಮಿಕ ಭವನ,<br>ಬನ್ನೇರುಘಟ್ಟ ರಸ್ತೆ,<br>ಬೆಂಗಳೂರು.<br>3) **ಅಧ್ಯಕ್ಷರು,**<br>ಭಾರತೀಯ ಮಜ್ದೂರ ಸಂಘ,<br>ನಂ. 458, ಒ.ಟಿ.ಸಿ. ರಸ್ತೆ,<br>ಬೆಂಗಳೂರು–53.<br>4) **ಅಧ್ಯಕ್ಷರು,**<br>ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್,<br>"ಸೂರಿ ಭವನ", # 40/5, 2ಬಿ ಮೇನ್,<br>16 ನೇ ಕ್ರಾಸ್, 2ನೇ ಬಿ' ಮುಖ್ಯ ರಸ್ತೆ,<br>ಸಂಪಂಗಿರಾಮನಗರ, ಬೆಂಗಳೂರು–27.<br>5) **ಅಧ್ಯಕ್ಷರು,**<br>ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್,<br>ನಂ.6, ಶಿರೂರು ಪಾರ್ಕ್ ರಸ್ತೆ,<br>ಶೇಷಾದ್ರಿಪುರಂ, ಬೆಂಗಳೂರು–20.<br>6) **ಅಧ್ಯಕ್ಷರು,**<br>ಕರ್ನಾಟಕ ಟೆಕ್ಸ್‌ಟೈಲ್ಸ್ ಮಿಲ್ಸ್ ಅಸೋಸಿಯೇಷನ್,<br>ವಸ್ತ್ರ ಭವನ, ನಂ.64, 4ನೇ ಮೇನ್,<br>18ನೇ ಕ್ರಾಸ್ ಹತ್ತಿರ, ಮಲ್ಲೇಶ್ವರಂ,<br>ಬೆಂಗಳೂರು– 3.<br>7) **ಅಧ್ಯಕ್ಷರು,**<br>ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ ಆಫ್<br>ಕಾಮರ್ಸ್ ಅಂಡ್ ಇಂಡಸ್ಟ್ರೀಸ್,<br>ಕೆ.ಜಿ.ರಸ್ತೆ,<br>ಬೆಂಗಳೂರು. |

| | |
|---|---|
| | 8) **ಅಧ್ಯಕ್ಷರು,**<br>ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್<br>ಅಸೋಸಿಯೇಷನ್ (ಕಾಸ್ಸಿಯಾ),<br>#106, 17 ನೇ ಅಡ್ಡ ರಸ್ತೆ,<br>ಮಾಗಡಿ ಕಾರ್ಡ್ ರಸ್ತೆ,<br>ಬೆಂಗಳೂರು.<br>9) **ಅಧ್ಯಕ್ಷರು,**<br>ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್<br>ಕಾಂಗ್ರೆಸ್ (ಇಂಟೆಕ್),<br>26/1, 8ನೇ ಮುಖ್ಯರಸ್ತೆ,<br>11ನೇ ಕ್ರಾಸ್, ಮಲ್ಲೇಶ್ವರಂ,<br>ಬೆಂಗಳೂರು–3<br>10) **ಅಧ್ಯಕ್ಷರು,**<br>ಬೆಂಗಳೂರು ಛೇಂಬರ್ ಆಫ್ ಇಂಡಸ್ಟ್ರೀಸ್ ಅಂಡ್<br>ಕಾಮರ್ಸ್ (ಬಿ.ಎಂ.ಸಿ.ಎ.), 3/4, 3ನೇ ಮಹಡಿ,<br>ಯೂನಿಟಿ ಬಿಲ್ಡಿಂಗ್, ಜೆ.ಸಿ. ರೋಡ್,<br>ಬೆಂಗಳೂರು–2<br>11) **ಶ್ರೀಮತಿ ಭಾರತಿ,**<br>ಟಿ.ಜಿ. ಬಡಾವಣೆ,<br>ಎಸ್.ಎಫ್.ಸಿ.ಎಸ್. ಬ್ಯಾಂಕ್ ಬಿಲ್ಡಿಂಗ್,<br>ಹೊಸಕೋಟೆ, ಬೆಂಗಳೂರು.<br>12) **ಶ್ರೀಮತಿ ಪಾರ್ವತಮ್ಮ. ಕೆ,**<br>ಕೋಂ ಬಿ.ಆರ್. ನಾಗರಾಜ್,<br>ನಂ.315–ಜೆ, 2ನೇ ಮುಖ್ಯ,<br>ಕಸ್ತೂರಿ ನಗರ,<br>ಈಸ್ಟ್ ಆಫ್ ಎನ್‌ಜಿಇಎಫ್,<br>ಬೆಂಗಳೂರು–43. |
| **<u>ಸಭೆಗೆ ಗೈರು ಹಾಜರಾದ ಸದಸ್ಯರು:</u>** | 1) **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**<br>ಆರ್ಥಿಕ ಇಲಾಖೆ,<br>ವಿಧಾನ ಸೌಧ, ಬೆಂಗಳೂರು. |
| **<u>ಮಂಡಳಿ ಅಧಿಕಾರಿಗಳು:</u>** | **1) ಶ್ರೀ ಇ. ಲಕ್ಷ್ಮಪ್ಪ,**<br>**ಕಲ್ಯಾಣ ಆಯುಕ್ತರು**<br>**2) ಶ್ರೀಮತಿ ಬಿ.ಎಸ್. ಮಂಜುಳಾದೇವಿ,**<br>**ಲೆಕ್ಕಾಧಿಕಾರಿಗಳು** |

ಕಲ್ಯಾಣ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 85ನೇ ತುರ್ತು ಸಭೆಗೆ (12ನೇ ಮಂಡಳಿಯ 5ನೇ ಸಭೆ) ಸ್ವಾಗತಿಸಿ ಸಭೆಯನ್ನು ನಡೆಸಿಕೊಡಲು ಅಧ್ಯಕ್ಷರನ್ನು ಕೋರಿದರು.

## ವಿಭಾಗ–I

**ಕಾರ್ಯಸೂಚಿ–1**

**ದಿನಾಂಕ: 29–02–2016 ರಂದು ನಡೆದ ಮಂಡಳಿಯ 84ನೇ ಸಭೆಯ ನಡವಳಿಯನ್ನು ಓದಿ ಸ್ಥಿರೀಕರಿಸುವುದು.**

ದಿನಾಂಕ:29–02–2016 ರಂದು ನಡೆದ ಮಂಡಳಿಯ 84ನೇ ಸಭೆಯ ನಡವಳಿಯನ್ನು ಕಲ್ಯಾಣ ಆಯುಕ್ತರು ಸಭೆ ಮುಂದೆ ಮಂಡಿಸಿ ಇದರಲ್ಲಿ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ತಿಳಿಸುವಂತೆ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಮಂಡಳಿ ಸದ್ಯಸರೆಲ್ಲ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಸರ್ವಾನುಮತದಿಂದ ಒಪ್ಪುವುದರ ಮೂಲಕ ಅಂಗೀಕರಿಸಲಾಯಿತು.

## ವಿಭಾಗ–II

**ಕಾರ್ಯಸೂಚಿ–2**

**ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ಸೆಕ್ಷನ್ 7(ಕ) ತಿದ್ದುಪಡಿ ಮಾಡಲು ಪುನರ್ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಬಗ್ಗೆ.**

ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಮಾನ್ಯ ಕಾರ್ಮಿಕ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ:04–03–2016 ರಂದು ಬೆಳಿಗ್ಗೆ 10:45 ಕ್ಕೆ ಮಾನ್ಯ ಸಚಿವರ ಕೊಠಡಿ ಸಂಖ್ಯೆ 327, 3ನೇ ಮಹಡಿ ವಿಧಾನ ಸೌಧದಲ್ಲಿ 'ಕರ್ನಾಟಕ ಕಾರ್ಮಿಕ ಕಲ್ಯಾಣ ಕಾಯ್ದೆ (ತಿದ್ದುಪಡಿ) ಬಿಲ್ 2016 The Karnataka Labour Welfare Fund (Amendment) Bill 2016 ಬಗ್ಗೆ ಪರಿಶೀಲಿಸಲು ವಿಧೇಯಕ ಪರಿಶೀಲನಾ ಸಭೆಯನ್ನು ಕರೆಯಲಾಗಿತ್ತು.

ಸದರಿ ಸಭೆಯಲ್ಲಿ ಮಾನ್ಯ ಅಪರ ಮುಖ್ಯಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ತಿದ್ದುಪಡಿ ಪ್ರಸ್ತಾವನೆಯ ₹10:20:10 ರಿಂದ ಮಂಡಳಿಗೆ ಬರುವ ಆದಾಯದಿಂದ ಕಾರ್ಮಿಕರ ಮತ್ತು ಅವರ ಅವಲಂಬಿತ ಕುಟುಂಬದವರ ಕ್ಷೇಮಾಭಿವೃದ್ಧಿಗೆ ಪೂರಕವಾದ ಕಲ್ಯಾಣ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ ಮತ್ತು ಈಗ ಸಂದಾಯವಾಗುತ್ತಿರುವ (ಕಾರ್ಮಿಕರು, ಮಾಲೀಕರು ಮತ್ತು ಸರ್ಕಾರದಿಂದ) ವಂತಿಕೆ ₹8/– ಕೋಟಿಗಳಲ್ಲಿ ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೇತನ ಮತ್ತು ಕಲ್ಯಾಣ ಯೋಜನೆಗಳಿಗೆ ಖರ್ಚಾಗುತ್ತದೆ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಹೆಚ್ಚಿಸುವ ಅಧಿಕಾರ ಸರ್ಕಾರಕ್ಕೆ ಇರುವುದರಿಂದ ಸದರಿ ತಿದ್ದುಪಡಿ ಬಿಲ್ಲನ್ನು ಹೆಚ್ಚಿಸಿ ಪುನರ್ ಪ್ರಸ್ತಾವನೆ ಸಲ್ಲಿಸುವಂತೆ ಅವಕಾಶ ನೀಡಬೇಕೆಂದು ಕೋರಿದರು.

ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು ಪ್ರಸ್ತಾವನೆ ಪರಿಶೀಲಿಸಿ, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಕೋರಿಕೆಯನ್ನು ಪರಿಗಣಿಸಿ ಪುನರ್ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

ಮಾನ್ಯ ಅಪರ ಮುಖ್ಯಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರು ಮಾನ್ಯ ಕಾರ್ಮಿಕ ರಾಜ್ಯ ಸಚಿವರೊಂದಿಗೆ ಚರ್ಚಿಸಿ ಅವರ ಸಲಹೆಗಳನ್ನು ಪಡೆದು ಸದರಿ ತಿದ್ದುಪಡಿ ಪ್ರಸ್ತಾವನೆಯಲ್ಲಿ ವಾರ್ಷಿಕ ಕಾರ್ಮಿಕರಿಂದ ₹20, ಮಾಲೀಕರಿಂದ ₹40, ಸರ್ಕಾರದಿಂದ ₹20 ರಂತೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿರುತ್ತಾರೆ. ಅದರಂತೆ ಪ್ರಸ್ತಾವನೆಗೆ ತಿದ್ದುಪಡಿಯಲ್ಲಿ ವಂತಿಕೆ 20:40:20 ರ ಅನುಪಾತದಲ್ಲಿ ಕಾರ್ಮಿಕರ, ಮಾಲೀಕರ ಮತ್ತು ಸರ್ಕಾರದ ವಂತಿಕೆಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದ್ದರಿಂದ ಈ ಹಿಂದೆ 81ನೇ ಮಂಡಳಿ ಸಭೆಯಲ್ಲಿ ವಂತಿಕೆಯನ್ನು 10:20:10 ರ ಅನುಪಾತದಲ್ಲಿ ಹೆಚ್ಚಿಸಿರುವುದನ್ನು ಬದಲಾಗಿ 20:40:20 ಕ್ಕೆ ಮತ್ತೊಮ್ಮೆ ಪರಿಷ್ಕರಿಸಲು ಮಂಡಳಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದರು.

## ಚರ್ಚೆ ಮತ್ತು ನಿರ್ಣಯ

ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ಸೆಕ್ಷನ್ 7(ಕ) ಗೆ ತಿದ್ದುಪಡಿಯ ಪುನರ್ ಪ್ರಸ್ತಾವನೆ ಬಗ್ಗೆ ಶ್ರೀ ನಾಗರಾಜು, ಕಾರ್ಯದರ್ಶಿ, ಎಐಟಿಯುಸಿ ರವರು ಮಾತನಾಡಿ ಈ ಹಿಂದೆ ಮಂಡಳಿ ಸಭೆಯಲ್ಲಿ ಆಗಿರುವ 10:20:10 ರ ಅನುಪಾತದಲ್ಲಿ ಕಾರ್ಯಗತ (implement) ಮಾಡುವಂತೆ ಸಭೆಯಲ್ಲಿ ತಿಳಿಸಿದರು. ಶ್ರೀ ರಾಮಕೃಷ್ಣ ಪೂಂಜಾ, ಅಧ್ಯಕ್ಷರು, ಬಿಎಂಎಸ್ ಹಾಗೂ ಶ್ರೀ ಮಾಂತೇಷ್, ಸಿಐಟಿಯು ರವರು 20:40:20 ರ ಅನುಪಾತದಲ್ಲಿ ಮಾಡಿದರೆ ಕಾರ್ಮಿಕರಿಗೆ ಹೆಚ್ಚಿನ ಹೊರೆ ಬೀಳುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಲ್ಯಾಣ ಆಯುಕ್ತರು ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಮಾತ್ರ ಕಟ್ಟಬೇಕಾಗಿರುತ್ತದೆ ಎಂದು ತಿಳಿಸಿದರು. ನಂತರ ಶ್ರೀ ಶ್ರೀಪ್ರಕಾಶ್, ಕಾಸಿಯಾ ರವರು ಮಾಲೀಕರಿಗೆ ಹೆಚ್ಚಿನ ಹೊರೆ ಬೀಳುವುದಾಗಿ ತಿಳಿಸಿದರು. ಈ ಸಮಯದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು 10:20:10 ರ ಅನುಪಾತವಿದ್ದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಕಲ್ಯಾಣ ಯೋಜನೆಗಳನ್ನು ನೀಡಲು ಸಾಧ್ಯವಾಗುವುದಿಲ್ಲ ವೆಂದು, ಹಾಗೂ ಮಹಿಳಾ ಕಾರ್ಮಿಕರಿಗೆ ಹೆಚ್ಚಿನ ಕಲ್ಯಾಣ ಯೋಜನೆಗಳನ್ನು ರೂಪಿಸಬೇಕಾಗಿರುತ್ತದೆ ಎಂದು ತಿಳಿಸಿದರು. ದಿನಾಂಕ:04–03–2016 ರಂದು ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ವಂತಿಕೆಯನ್ನು ಪುನರ್ ಪರಿಶೀಲಿಸಲು ತಿಳಿಸಿರುವುದರಿಂದ ವಂತಿಕೆಯನ್ನು 20:40:20ರ ಅನುಪಾತದಲ್ಲಿ ಪ್ರಸ್ತಾವನೆ ಸಲ್ಲಿಸಲು ಸಲಹೆ ನೀಡಿದರು. ಈ ಸಮಯದಲ್ಲಿ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರವರು ಈಗ ಇರುವ 10:20:10 ರ ಅನುಪಾತದಲ್ಲಿ ಬರುವ ವಂತಿಕೆಯಿಂದ ಕಾರ್ಮಿಕರಿಗೆ ಹೆಚ್ಚಿನ ಯೋಜನೆ ನೀಡಲು ಸಾಧ್ಯವಾಗುವುದಿಲ್ಲ. ಈಗ ಇರುವ ₹6 ರಲ್ಲಿ ಈಗಿನ ಕಾಲದಲ್ಲಿ ಒಂದು ಕಾಫಿ ಕೂಡ ಬರುವುದಿಲ್ಲವೆಂದು ಇದೇ ಆಯವ್ಯಯದ ಅಧಿವೇಶನದಲ್ಲಿ ಈ ಬಿಲ್ಲನ್ನು ತರಲಾಗುವುದು. ಆದ್ದರಿಂದ 20:40:20 ರ ಅನುಪಾತಕ್ಕೆ ತಮ್ಮೆಲ್ಲರ ಸಹಕಾರ ಬೇಕೆಂದು ಕೇಳಿದರು. ಈ ಸಮಯದಲ್ಲಿ ಶ್ರೀ.ಶ್ರೀಪ್ರಕಾಶ್, ಕಾಸಿಯಾ ರವರು ಕಾರ್ಮಿಕರಿಂದ 20 ಮಾಲೀಕರಿಂದ 40 ಸರ್ಕಾರದಿಂದ 40 ನೀಡಿದರೆ ಇನ್ನು ಹೆಚ್ಚಿನ ಯೋಜನೆಯನ್ನು ಕಾರ್ಮಿಕರಿಗೆ ನೀಡಬಹುದಾಗಿದೆ ಎಂದು ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರು ಒಮ್ಮತದಿಂದ ಆಗಬಹುದು ಎಂದು ಧ್ವನಿಗೂಡಿಸಿದರು. ಈ ಸಮಯದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸರ್ಕಾರದಿಂದ 40 ರ ಅನುಪಾತದಲ್ಲಿ ನೀಡುವಂತೆ ಕೋರಿರುತ್ತೀರಿ. ಇದಕ್ಕೆ ಪ್ರಯತ್ನಪಡುವುದಾಗಿ ತಿಳಿಸಿದರು. ನಂತರ ಸಭೆಯು 20:40:20 ರ ಅನುಪಾತದಲ್ಲಿ ತಿದ್ದುಪಡಿ ಮಾಡುವಂತೆ ಅಧ್ಯಕ್ಷರನ್ನೊಳಗೊಂಡಂತೆ ಸದಸ್ಯರೆಲ್ಲರು ಸರ್ವಾನುಮತದಿಂದ ಅನುಮೋದನೆ ನೀಡಿದರು.

**ಕಾರ್ಯಸೂಚಿ–3**

**ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಹ ಧನ ಸಹಾಯವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿರುವುದನ್ನು ಪುನರ್ ಪರಿಷ್ಕರಿಸುವ ಬಗ್ಗೆ.**

ದಿನಾಂಕ: 29–02–2016 ರಂದು ನಡೆದ 84ನೇ ಮಂಡಳಿ ಸಭೆಯಲ್ಲಿ ಕಾರ್ಮಿಕ ಕಲ್ಯಾಣ ಯೋಜನೆಯಡಿ ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಹೈಸ್ಕೂಲ್ (8 ರಿಂದ 10ನೇ ತರಗತಿಯವರೆಗೆ) ₹3,000/–, ಪದವಿ ಪೂರ್ವ ತರಗತಿಗೆ ₹4,000/– ಪದವಿ ತರಗತಿಗೆ ₹5000/–, ಸ್ನಾತಕೋತರ ಪದವಿಗಳಿಗೆ ₹6,000/– ಹಾಗೂ ವೈದ್ಯಕೀಯ ಮತ್ತು ಇಂಜಿನೀಯರಿಂಗ್ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ₹10,000/– ಗಳ ಪ್ರೋತ್ಸಾಹ ಧನ ಸಹಾಯವನ್ನು ಮಂಜೂರು ಮಾಡಲು ಶೇಕಡವಾರು ಅಂಕಗಳನ್ನು ಪರಿಗಣಿಸದೇ ತೇರ್ಗಡೆಯಾದ ಎಲ್ಲಾ ಕಾರ್ಮಿಕರ ಮಕ್ಕಳಿಗೆ ಧನ ಸಹಾಯ ನೀಡುವಂತೆ ಮಂಡಳಿ ನಿರ್ಣಯಿಸಲಾಗಿತ್ತು.

ಮಂಡಳಿ ನಿರ್ಣಯದಂತೆ ಮುಂದಿನ 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅರ್ಜಿ ಸಲ್ಲಿಸುವ ಅರ್ಹ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಮತ್ತು ಕಲ್ಯಾಣ ಯೋಜನೆಗಳ ಇನ್ನಿತರೆ ಸೌಲಭ್ಯಗಳನ್ನು ನೀಡಿದ್ದಲ್ಲಿ ಮಂಡಳಿಗೆ ತಗಲುವ ಅಂದಾಜು ವಿವರಗಳ ಪಟ್ಟಿ ಈ ಕೆಳಗಿನಂತಿದೆ.

| **ವರ್ಷ** | **2015–16 (2016 ಫೆಬ್ರವರಿ ವರೆಗೆ)** | | **2016–17ನೇ ಸಾಲಿನಲ್ಲಿ ಶೇಕಡವಾರು ಅಂಕಗಳನ್ನು ಪರಿಗಣಿಸದೆ ಪ್ರೋತ್ಸಾಹ ಧನ ನೀಡುವುದರಿಂದ ತಗಲುವ ವೆಚ್ಚದ ವಿವರ** | |
|---|---|---|---|---|
| **ಯೋಜನೆಗಳ ವಿವರ** | **ಫಲಾನುಭವಿಗಳ ಒಟ್ಟು ಸಂಖ್ಯೆ** | **ಮೊತ್ತ ₹** | **ಫಲಾನುಭವಿಗಳ ಒಟ್ಟು ಸಂಖ್ಯೆ** | **ಮೊತ್ತ ₹** |
| ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | 9168 | 1,62,84,000 | 25000 | 7,50,00,000 |
| ವೈದ್ಯಕೀಯ ನೆರವು | 05 | 50,000 | 10 | 1,00,000 |
| ಮೃತ ಕಾರ್ಮಿಕನ ಕುಟುಂಬಕ್ಕೆ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ | 138 | 6,90,000 | 150 | 7,50,000 |
| ಗಣಕ ಯಂತ್ರ ತರಬೇತಿ | – | – | – | – |
| ಕಾರ್ಮಿಕರ ಅಪಘಾತ ಧನ ಸಹಾಯ | – | – | 25 | 1,25,000 |

| | | | | |
|---|---|---|---|---|
| ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ | 400 (ಒಂದು ಸಂಘಟನೆ) | 40,000 | 1000 (10 ಸಂಘಟನೆಗೆ) ಒಂದು ಸಂಘಟನೆಗೆ ₹ 50,000 ರಂತೆ | 5,00,000 |
| ವಾರ್ಷಿಕ ವೈದ್ಯಕೀಯ ತಪಾಸಣೆ ನಡೆಸುವ ಟ್ರೇಡ್ ಯೂನಿಯನ್/ ಸಂಸ್ಥೆಗಳಿಗೆ ಧನ ಸಹಾಯ | 200 (ಒಂದು ಸಂಘಟನೆ) | 20,000 | 1000 (10 ಸಂಘಟನೆಗೆ) ಒಂದು ಸಂಘಟನೆಗೆ ₹ 30,000 ರಂತೆ | 3,00,000 |
| **ಒಟ್ಟು** | **9911** | **1,70,84,000** | **27175** | **7,67,75,000** |

2016–17ನೇ ಸಾಲಿಗೆ ಒಟ್ಟು ಕಾರ್ಮಿಕರ ಸಂಖ್ಯೆ: **2722222** ಇದ್ದು ಕಾರ್ಮಿಕರು ಮತ್ತು ಮಾಲೀಕರಿಂದ ₹ 6/– ಕೋಟಿ ಹಾಗೂ ಸರ್ಕಾರದಿಂದ ₹2/– ಕೋಟಿ ಸೇರಿ ಒಟ್ಟು ₹**8**/– ಕೋಟಿ ನಿರೀಕ್ಷಿಸಿದ್ದು, ಇದರಲ್ಲಿ ಕಲ್ಯಾಣ ಯೋಜನೆಗಳಿಗೆ 84ನೇ ಮಂಡಳಿ ಸಭೆಯ ನಿರ್ಣಯದಂತೆ ಪರಿಷ್ಕರಿಸಿ ಹೆಚ್ಚಿಗೆ ಮಾಡಲಾಗಿರುವ ಧನ ಸಹಾಯವನ್ನು ಕನಿಷ್ಠ ತೇರ್ಗಡೆ ಹೊಂದಿದ್ದ, ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ **ಕನಿಷ್ಠ ¼ನೇ ಭಾಗದಷ್ಟು** ಕಾರ್ಮಿಕರ ಮಕ್ಕಳಿಗೆ ಯಾವುದೇ ನಿರ್ಬಂಧವಿಲ್ಲದೆ ಶೈಕ್ಷಣಿಕ ಪ್ರೋತ್ಸಾಹ ಧನ ನೀಡಿದ್ದಲ್ಲಿ, **₹8/– ರಿಂದ ₹10/–** ಕೋಟಿಯನ್ನು ಯೋಜನೆಗಳಿಗೆ ವೆಚ್ಚ ಮಾಡಬೇಕಾಗಿರುತ್ತದೆ. ಮತ್ತು ಆಡಳಿತಾತ್ಮಕ ವೆಚ್ಚ ಹಾಗೂ ಸಿಬ್ಬಂದಿ ವೇತನ ಮತ್ತು ಇನ್ನಿತರೆ ಭತ್ಯೆಗಳನ್ನು ಭರಿಸಬೇಕಾಗಿರುವುದರಿಂದ ವಾರ್ಷಿಕವಾಗಿ ಸಂಗ್ರಹವಾಗುವ ವಂತಿಕೆಗಿಂತ ಹೆಚ್ಚು ವೆಚ್ಚ ಭರಿಸಬೇಕಾಗಿದ್ದು, ಈ ವೆಚ್ಚ ಸಾಧ್ಯವಾಗದ ಕಾರಣ ಪರಿಷ್ಕರಿಸುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಪ್ರತಿ ಹಂತಕ್ಕೆ (ತರಗತಿ) ₹500/– ಗಳಂತೆ ಪರಿಷ್ಕರಿಸಿ ಹೆಚ್ಚಿಸಿ ಮುಂದಿನ 2016–17ನೇ ಸಾಲಿಗೆ ಧನ ಸಹಾಯ ನೀಡುವ ಬಗ್ಗೆ ಹಾಗೂ 84ನೇ ಮಂಡಳಿ ಸಭೆಯಲ್ಲಿ ಪರಿಷ್ಕರಿಸುವ ಮೊತ್ತವನ್ನು ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ಸೆಕ್ಷನ್ 7(ಕ) ತಿದ್ದುಪಡಿಯನ್ನು ಸರ್ಕಾರದಿಂದ 20:40:20 ರ ಅನುಪಾತದಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಪರಿಷ್ಕರಿಸಬಹುದಾಗಿದೆ. ಇದನ್ನು ಮಂಡಳಿಯ ಅನುಮೋದನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

## <u>ಚರ್ಚೆ ಮತ್ತು ನಿರ್ಣಯ</u>

ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿರುವುದನ್ನು ಪುನರ್ ಪರಿಷ್ಕರಿಸುವ ಬಗ್ಗೆ ಸಭೆಯಲ್ಲಿ ಮಂಡಿಸಿದಾಗ ಶ್ರೀ ನಾಗರಾಜ, ಎಐಟಿಯುಸಿ ರವರು 84ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಿದಂತೆ ಮುಂದುವರೆಸಲು ತಿಳಿಸಿದರು. ಇದಕ್ಕೆ ಕಲ್ಯಾಣ ಆಯುಕ್ತರು ಕನಿಷ್ಠ ತೇರ್ಗಡೆ ಹೊಂದಿದ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ನೀಡಿದರೆ **₹8/- ರಿಂದ ₹10/-** ಕೋಟಿ ವಂತಿಕೆಯೆಲ್ಲಾ ಈ ಯೋಜನೆಗೆ ಖರ್ಚಾಗುತ್ತದೆ ಎಂದು ಸಭೆಗೆ ತಿಳಿಸಿದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ವರ್ಷಕ್ಕೆ ಬರುವ ವಂತಿಕೆಯನ್ನೆಲ್ಲ ಪೂರ್ಣ ಉಪಯೋಗಿಸಿದರೆ ಮುಂದಿನ ವರ್ಷಗಳಲ್ಲಿ ಮಂಡಳಿಯು ಸಂಕಷ್ಟಕ್ಕೆ ಸಿಲುಕುತ್ತದೆ ಎಂದು ತಿಳಿಸಿದರು. ಕಲ್ಯಾಣ ಆಯುಕ್ತರು 20:40:20 ರ ಅನುಪಾತದಲ್ಲಿ ತಿದ್ದುಪಡಿಯಾದ ನಂತರ 84ನೇ ಮಂಡಳಿ ಸಭೆಯಲ್ಲಿ ಹೆಚ್ಚಿಸಲಾಗಿರುವ ಕಲ್ಯಾಣ ಯೋಜನೆಗಳ ಮೊತ್ತವನ್ನು ನೀಡುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಭೆಯಲ್ಲಿದ್ದ ಸದಸ್ಯರೆಲ್ಲರು 84ನೇ ಮಂಡಳಿ ಸಭೆಯಲ್ಲಿ ಹೆಚ್ಚಿಸಲಾಗಿರುವ ಕಲ್ಯಾಣ ಯೋಜನೆಗಳನ್ನು ಮೊತ್ತವನ್ನು ಮುಂದುವರೆಸುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನ್ನೊಳಗೊಂಡಂತೆ ಸದಸ್ಯರೆಲ್ಲರು ಒಮ್ಮತದಿಂದ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1. ಶ್ರೀ ಶ್ರೀಪ್ರಕಾಶ, ಕಾಸಿಯಾ ರವರು ಸಮುದಾಯ ಭವನ ನಿರ್ಮಿಸುವ ಬದಲು ಕಾರ್ಮಿಕರ ಹೆಣ್ಣುಮಕ್ಕಳಿಗೆ ಪೇಯಿಂಗ್ ಗೆಸ್ಟ್ ನಿರ್ಮಿಸಲು ಸಲಹೆ ನೀಡಿದರು. ಅದಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ತಮ್ಮ ಸೆಲಹೆ ಉತ್ತಮವಾಗಿದ್ದು, ಇದನ್ನು ಮುಂದಿನ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಈ ಸಮಯದಲ್ಲಿ ಶ್ರೀ ನಾಗರಾಜು, ಎಐಟಿಯುಸಿ ರವರು ಇದರ ಜೊತೆ ಕಾರ್ಮಿಕರಿಗೆ ತಂಗುದಾಣವನ್ನು ನಿರ್ಮಿಸುವಂತೆ ಕೋರಿದರು. ಇದಕ್ಕೆ ಅಧ್ಯಕ್ಷರು ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ತಿದ್ದುಪಡಿಯಾದ ನಂತರ ಇದರ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದಾಗ ಸದಸ್ಯರೆಲ್ಲಾ ಸರ್ವಾನುಮತದಿಂದ ಅನುಮೋದಿಸಿದರು.

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಸಭೆಯ ಸದಸ್ಯರಿಗೆ ಬೀಳ್ಕೊಡುಗೆ:**

ಕಲ್ಯಾಣ ಆಯುಕ್ತರು ಸಭೆಯಲ್ಲಿ ಮಂಡಳಿಯ ಸದಸ್ಯರಾಗಿ ದಿನಾಂಕ; 18–03–2016 ಕ್ಕೆ ಮೂರು ವರ್ಷದ ಅವಧಿ ಪೂರೈಸಿ ನಿವೃತ್ತರಾಗಿರುವ ಮಂಡಳಿಯ ಸದಸ್ಯರಿಗೆ ಮಾನ್ಯ ಅಧ್ಯಕ್ಷರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸನ್ಮಾನಿಸಲು ಒಬ್ಬಬ್ಬ ಸದಸ್ಯರ ಹೆಸರನ್ನು ಕರೆದು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

**ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.**

ಸಹಿ/–

**ಕಲ್ಯಾಣ ಆಯುಕ್ತರು.**
**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**
**ಯಶವಂತಪುರ, ಬೆಂಗಳೂರು.**

ಸಹಿ/–

**ಮಾನ್ಯ ಕಾರ್ಮಿಕ ರಾಜ್ಯ ಸಚಿವರು**
**ಹಾಗೂ ಅಧ್ಯಕ್ಷರು,**
**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,**
**ವಿಧಾನಸೌಧ, ಬೆಂಗಳೂರು.**